# ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

## ದಿನಾಂಕ 28–09–2012 ರಂದು ಮಧ್ಯಾಹ್ನ 12.30 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳು

* * * * *

**ವಿಷಯ ಸಂಖ್ಯೆ 01** ದಿನಾಂಕ 13–09–2012 ರಂದು ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯ ನಡೆವಳಿಗಳನ್ನು ಓದಿ ದಾಖಲಿಸುವ ಬಗ್ಗೆ.

**ಟಿಪ್ಪಣಿ** ದಿನಾಂಕ 13–09–2012 ರಂದು ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ದಿನಾಂಕ 13–09–2012 ರಂದು ನಡೆದ ಪ್ರಾಧಿಕಾರದ ಸಭೆಯ ನಡೆವಳಿಗಳನ್ನು ಓದಿ ದಾಖಲು ಮಾಡಲಾಯಿತು.

**ವಿಷಯ ಸಂಖ್ಯೆ 02** ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2012ನೇ ಸಾಲಿನ ಆಗಸ್ಟ್ ಮಾಹೆಯ ಜಮಾ ಖರ್ಚು ಪಟ್ಟಿಯನ್ನು ಅನುಮೋದಿಸುವ ಬಗ್ಗೆ.

**ಟಿಪ್ಪಣಿ** ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2012ನೇ ಸಾಲಿನ ಆಗಸ್ಟ್ ಮಾಹೆಯ ಜಮಾ ಖರ್ಚು ತಃಖ್ತೆ ಅನುಬಂಧ–1 ರಲ್ಲಿ ಲಗತ್ತಿಸಿ ಸಭೆಯ ಪರಿಶೀಲನೆಗೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2012ನೇ ಸಾಲಿನ ಆಗಸ್ಟ್ ಮಾಹೆಯ ಜಮಾ ಖರ್ಚು ತಃಖ್ತೆ ಅನುಬಂಧ–1 ರಲ್ಲಿ ತೋರಿಸಿರುವಂತೆ ಜಮಾ ಖರ್ಚು ತಃಖ್ತೆಯನ್ನು ಸರ್ವಾನುಮತದಿಂದ ಸಭೆಯು ಅನುಮೋದಿಸಿತು.

**ವಿಷಯ ಸಂಖ್ಯೆ 03** ತುಮಕೂರು ತಾಲ್ಲೂಕು, ಬೆಳ್ಳಾವಿ ಹೋಬಳಿ, ಪೆರಮನಹಳ್ಳಿ ಮತ್ತು ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ಮಲ್ಲಸಂದ್ರ ಗ್ರಾಮಗಳ ಕೆಲವು ಸರ್ವೆ ನಂಬರ್‌ಗಳಲ್ಲಿ ಆಟೋ ಪಾರ್ಕ್ ನಿರ್ಮಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 13–09–2012 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ವಿಷಯ ಸಂಖ್ಯೆ 03 ರಲ್ಲಿ ಮಂಡಿಸಲಾಗಿತ್ತು. ಉದ್ದೇಶಿತ ಆಟೋ ಪಾರ್ಕ್ ಪ್ರದೇಶದಲ್ಲಿ ಭೂ ಪರಿವರ್ತನೆಯಾಗಿರುವ ಬಗ್ಗೆ, ವಿನ್ಯಾಸ ಅನುಮೋದನೆಯಾಗಿರುವ ಬಗ್ಗೆ, ಕಟ್ಟಡಗಳ ಇರುವ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಲಾಯಿತು. ಅದರಂತೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ. ಉದ್ದೇಶಿತ ಭೂ ಪ್ರದೇಶದ ವಿಸ್ತೀರ್ಣವು ತುಮಕೂರು ತಾಲ್ಲೂಕು, ಬೆಳ್ಳಾವಿ

ಹೋಬಳಿ, ಪೆರಮನಹಳ್ಳಿ ಗ್ರಾಮಕ್ಕೆ ಸೇರಿದ 85 ಎಕರೆ 29 ಗುಂಟೆ ಪ್ರದೇಶವು ಸಾಗುವಳಿ ಜಮೀನಾಗಿದ್ದು, 0-35 ಗುಂಟೆ ಖರಾಬು ಜಮೀನು ಒಳಗೊಂಡಿರುತ್ತದೆ. ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ಮಲ್ಲಸಂದ್ರ ಗ್ರಾಮಕ್ಕೆ ಸೇರಿದ 6 ಎಕರೆ 06 ಗುಂಟೆ ಪ್ರದೇಶವು ಸಾಗುವಳಿ ಜಮೀನಾಗಿರುತ್ತದೆ. ಒಟ್ಟಾರೆ 92 ಎಕರೆ 30 ಗುಂಟೆ ವಿಸ್ತೀರ್ಣವಾಗಿರುತ್ತದೆ. ಈ ಪೈಕಿ ಪೆರಮನಹಳ್ಳಿ ಹಾಗೂ ಮಲ್ಲಸಂದ್ರ ಗ್ರಾಮಕ್ಕೆ ಸೇರಿರುವ 36 ಎಕರೆ 31 ಗುಂಟೆ ಪ್ರದೇಶವು ಭೂ ಪರಿವರ್ತನೆಯಾಗಿರುತ್ತದೆ. ಉಳಿಕೆ 55 ಎಕರೆ 04 ಗುಂಟೆ ಪ್ರದೇಶವು ಸಾಗುವಳಿ ಜಾಗವಾಗಿರುತ್ತದೆ. ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪೆರಮನಹಳ್ಳಿ ಹಾಗೂ ಮಲ್ಲಸಂದ್ರ ಗ್ರಾಮಗಳಿಗೆ ಸೇರಿರುವ ಒಟ್ಟು 93 ಎಕರೆ 30 ಗುಂಟೆ ವಿಸ್ತೀರ್ಣದಲ್ಲಿ ಭೂ ಪರಿವರ್ತನೆಯಾಗಿರುವ 36 ಎಕರೆ 31 ಗುಂಟೆ ಪ್ರದೇಶವನ್ನು ಹೊರತುಪಡಿಸಿ, ಉಳಿಕೆ ಖರಾಬು ಪ್ರದೇಶ ಸೇರಿ 55 ಎಕರೆ 04 ಗುಂಟೆ ಪ್ರದೇಶವನ್ನು ಉದ್ದೇಶಿತ ಆಟೋ ಪಾರ್ಕ್ ಪ್ರದೇಶಕ್ಕೆ ಭೂಸ್ವಾಧೀನ ಪಡಿಸಿಕೊಳ್ಳಲು ನಿಯಮಾನುಸಾರ ಕ್ರಮಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 04**

ತುಮಕೂರು ಅಮಾನಿಕೆರೆಯ ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗದ ಉದ್ಯಾನವನ ಹಾಗೂ ನೀರಿನ ಕಾರಂಜಿಗೆ 63 ಕೆ.ವಿ.ಎ. ಸಾಮರ್ಥ್ಯದ ವಿದ್ಯುತ್ ಪರಿವರ್ತಕ ಅಳವಡಿಸಿ ವಿದ್ಯುತ್ ಸಂಪರ್ಕ ನೀಡುವ ಕಾಮಗಾರಿ.

**ಟಿಪ್ಪಣಿ**

ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆಯ ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗದ ಉದ್ಯಾನವನ ಹಾಗೂ ನೀರಿನ ಕಾರಂಜಿಗೆ 63 ಕೆ.ವಿ.ಎ. ಸಾಮರ್ಥ್ಯದ ವಿದ್ಯುತ್ ಪರಿವರ್ತಕ ಅಳವಡಿಸಿ ವಿದ್ಯುತ್ ಸಂಪರ್ಕ ನೀಡುವ ಕಾಮಗಾರಿಯ ಸಂಬಂಧ ಬೆಸ್ಕಾಂ ನಗರ ಉಪವಿಭಾಗ, ತುಮಕೂರು ರವರಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಲು ಕೋರಲಾಗಿದ್ದು, ಬೆಸ್ಕಾಂ ಇಲಾಖೆಯವರು ರೂ.4,67,913.00 ಗಳ ಮೊತ್ತದ ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ಅಂದಾಜು ಪಟ್ಟಿಯ ಮೊತ್ತಕ್ಕೆ ಶೇಕಡ 10 ರಷ್ಟು ಮೇಲ್ವಿಚಾರಣಾ ಶುಲ್ಕ ರೂ.46,791.00 ಗಳನ್ನು ಪಾವತಿಸಲು ಸೂಚಿಸಿರುತ್ತಾರೆ. ಅದರಂತೆ ಬೆಸ್ಕಾಂ ಇಲಾಖೆಗೆ ರೂ.46,791.00 ಗಳ ಮೊತ್ತವನ್ನು ದಿನಾಂಕ 15-09-2012 ರಂದು ಪಾವತಿಸಲಾಗಿದೆ. ಈ ಕಾಮಗಾರಿಯನ್ನು Self Execution Scheme ನಲ್ಲಿ ಪ್ರಾಧಿಕಾರದಿಂದ ತೆಗೆದುಕೊಳ್ಳಲು ದಿನಾಂಕ 13-09-2012 ರಂದು ಟೆಂಡರ್ ಆಹ್ವಾನಿಸಲಾಗಿದ್ದು, ಘಟನೋತ್ತರ ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ಅಮಾನಿಕೆರೆಯ ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗದ ಉದ್ಯಾನವನ ಹಾಗೂ ನೀರಿನ ಕಾರಂಜಿಗೆ 63 ಕೆ.ವಿ.ಎ. ಸಾಮರ್ಥ್ಯದ ವಿದ್ಯುತ್ ಪರಿವರ್ತಕ ಅಳವಡಿಸಿ ವಿದ್ಯುತ್ ಸಂಪರ್ಕ ನೀಡುವ ಕಾಮಗಾರಿಯ ಸಂಬಂಧ ಬೆಸ್ಕಾಂ ನಗರ ಉಪವಿಭಾಗ, ತುಮಕೂರು ರವರಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಲು ಕೋರಲಾಗಿದ್ದು, ಬೆಸ್ಕಾಂ ಇಲಾಖೆಯವರು ರೂ.4,67,913.00 ಗಳ ಮೊತ್ತದ ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ಅಂದಾಜು ಪಟ್ಟಿಯ ಮೊತ್ತಕ್ಕೆ ಶೇಕಡ 10 ರಷ್ಟು ಮೇಲ್ವಿಚಾರಣಾ ಶುಲ್ಕ ರೂ.46,791.00 ಗಳನ್ನು ಪಾವತಿಸಿರುವುದಕ್ಕೆ ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.

**ವಿಷಯ ಸಂಖ್ಯೆ 05** ತುಮಕೂರು ಅಮಾನಿಕೆರೆಯ ಕೋತಿತೋಪು ಭಾಗದ ಉದ್ಯಾನವನದಲ್ಲಿ ವಾಕ್‌ಪಾತ್ ಪಕ್ಕದಲ್ಲಿ 16 Sqm, 4 Core U.G.Cable ಮತ್ತು 6 Sqm, 2 Core Audio copper cable ಅನ್ನು ಸರಬರಾಜು ಮಾಡುವುದು ಮತ್ತು ಅಳವಡಿಸುವ ಕಾಮಗಾರಿ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆಯ ಕೋತಿತೋಪು ಭಾಗದ ಉದ್ಯಾನವನದಲ್ಲಿ ವಾಕ್‌ಪಾತ್ ಪಕ್ಕದಲ್ಲಿ 16 Sqm, 4 Core U.G.Cable ಮತ್ತು 6 Sqm, 2 Core Audio copper cable ಅನ್ನು ಸರಬರಾಜು ಮಾಡುವುದು ಮತ್ತು ಅಳವಡಿಸುವ ಕಾಮಗಾರಿಯ ಸಂಬಂಧ ಅಂದಾಜು ಪಟ್ಟಿಯನ್ನು ರೂ.3.58 ಲಕ್ಷಗಳಿಗೆ ತಯಾರಿಸಲಾಗಿದ್ದು, ಈ ಕಾಮಗಾರಿಯನ್ನು ಕೈಗೊಳ್ಳಲು ದಿನಾಂಕ 13-09-2012 ರಂದು e-procurement ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಘಟನೋತ್ತರ ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ಅಮಾನಿಕೆರೆಯ ಕೋತಿತೋಪು ಭಾಗದ ಉದ್ಯಾನವನದಲ್ಲಿ ವಾಕ್‌ಪಾತ್ ಪಕ್ಕದಲ್ಲಿ 16 Sqm, 4 Core U.G.Cable ಮತ್ತು 6 Sqm, 2 Core Audio copper cable ಅನ್ನು ಸರಬರಾಜು ಮಾಡುವುದು ಮತ್ತು ಮತ್ತು ಅಳವಡಿಸುವ ಕಾಮಗಾರಿಯ ಸಂಬಂಧ ಅಂದಾಜು ಪಟ್ಟಿಯನ್ನು ರೂ.3.58 ಲಕ್ಷಗಳಿಗೆ ತಯಾರಿಸಲಾಗಿದ್ದು, ಈ ಕಾಮಗಾರಿಯು ಅತ್ಯಂತ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ದಿನಾಂಕ 13-09-2012 ರಂದು e-procurement ಮುಖಾಂತರ ಟೆಂಡರ್ ಆಹ್ವಾನಿಸಿರುವುದಕ್ಕೆ ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.

**ವಿಷಯ ಸಂಖ್ಯೆ 06** ತುಮಕೂರು ನಗರದ ಉಪ್ಪಾರಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಲು ಯೋಜನಾ ವರದಿಯನ್ನು ತಯಾರಿಸಲು ತಾಂತ್ರಿಕ ಸಲಹೆಗಾರರನ್ನು ನೇಮಿಸುವ ಬಗ್ಗೆ.

**ಟಿಪ್ಪಣಿ**

ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರದ ಉಪ್ಪಾರಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಲು ಯೋಜನಾ ವರದಿಯನ್ನು ತಯಾರಿಸಲು ತಾಂತ್ರಿಕ ಸಲಹೆಗಾರರನ್ನು ನೇಮಿಸುವ ಸಂಬಂಧ Request for proposal (RFP) ಪ್ರಕಟಣೆಯನ್ನು ದಿನಾಂಕ 20-06-2012 ರಂದು ಪ್ರಾಧಿಕಾರದಿಂದ ನೀಡಲಾಗಿದ್ದು, ಈ ಟೆಂಡರ್‌ನ್ನು ದಿನಾಂಕ 05-07-2012 ರಂದು ತೆರೆಯಲಾಗಿರುತ್ತದೆ. ಸದರಿ ಟೆಂಡರ್‌ಗೆ ಇಬ್ಬರು ತಾಂತ್ರಿಕ ಸಲಹೆಗಾರರು ದರಗಳನ್ನು ನಮೂದಿಸಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ವಿವರ | ಮೆ॥ ಸ್ಪೆಕ್ಟ್ರಾ ಅಸೋಸಿಯೇಟ್ಸ್ ತುಮಕೂರು. | ಮೆ॥ ರ್‍ಯಾಮ್ಕಿ ಎನ್‌ವಿರಾನ್‌ಮೆಂಟ್ ಇಂಜಿನಿಯರ್, ಬೆಂಗಳೂರು. |
|---|---|---|---|
| 1. | Preparation of DPR for improvement works to the Upparahally Lake by conducting detail survey, collection Hydraulic details, preparation of drawing and designs etc., | Rs.1,75,000 + 12.36% S.T. | Rs.6,68,000 + 12.36% S.T. |

ಮೇಲ್ಕಂಡ ಅರ್ಹ ತಾಂತ್ರಿಕ ಸಲಹೆಗಾರರ ಟೆಂಡರ್ ದರಗಳನ್ನು ತುಲನೆ ಮಾಡಲಾಗಿ ಮೆ॥ ಸ್ಪೆಕ್ಟ್ರಾ ಅಸೋಸಿಯೇಟ್ಸ್, ತುಮಕೂರು ಇವರು ರೂ.1,75,000+12.36% ಸರ್ವೀಸ್ ಟ್ಯಾಕ್ಸ್ ಶುಲ್ಕವನ್ನು ನಮೂದಿಸಿದ್ದು, ಈ ದರಗಳು ಅತಿ ಕಡಿಮೆ ದರಗಳಾಗಿದ್ದು, ಸದರಿಯವರ ದರಗಳನ್ನು ಅನುಮೋದಿಸಿ, ದಿನಾಂಕ 31-08-2012 ರಲ್ಲಿ ಕಾರ್ಯಾದೇಶ ನೀಡಲಾಗಿದೆ ಹಾಗೂ ಈ ಕಾಮಗಾರಿಯ ಯೋಜನಾ ವರದಿಯನ್ನು ದಿನಾಂಕ 30-11-2012 ರೊಳಗಾಗಿ ಸಲ್ಲಿಸಲು ತಾಂತ್ರಿಕ ಸಲಹೆಗಾರರಿಗೆ ಸೂಚಿಸಲಾಗಿರುತ್ತದೆ. ಸದರಿ ವಿಷಯವನ್ನು ಘಟನೋತ್ತರ ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ನಗರದ ಉಪ್ಪಾರಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಲು ಯೋಜನಾ ವರದಿಯನ್ನು ತಯಾರಿಸಲು ಮೆ॥ ಸ್ಪೆಕ್ಟ್ರಾ ಅಸೋಸಿಯೇಟ್ಸ್, ತುಮಕೂರು ಇವರು ರೂ.1,75,000+12.36% ಸರ್ವೀಸ್ ಟ್ಯಾಕ್ಸ್ ಶುಲ್ಕವನ್ನು ನಮೂದಿಸಿದ್ದು, ಇದು ಅತ್ಯಂತ ಕಡಿಮೆ ದರವಾಗಿದ್ದು, ಕಾಮಗಾರಿಯ ಯೋಜನಾ ವರದಿಯನ್ನು ತುರ್ತಾಗಿ ಅಂದರೆ ದಿನಾಂಕ 30-11-2012 ರೊಳಗಾಗಿ ಪೂರ್ಣಗೊಳಿಸ

ಬೇಕಾಗಿರುವುದರಿಂದ ಸದರಿ ಸಂಸ್ಥೆಗೆ ಕಾರ್ಯಾದೇಶ ನೀಡಿರುವುದಕ್ಕೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು.

**ವಿಷಯ ಸಂಖ್ಯೆ 07** ತುಮಕೂರು ಅಮಾನಿಕೆರೆಯಲ್ಲಿ ದಿನಪಾಳೆಯಲ್ಲಿ ಪಹರೆಯನ್ನು ಮಾಡಲು ಹೊರಗುತ್ತಿಗೆ ಆಧಾರದ ಮೇಲೆ ಸೆಕ್ಯೂರಿಟಿ ಸಿಬ್ಬಂದಿಯನ್ನು ಒದಗಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆಯಲ್ಲಿ ದಿನಪಾಳೆಯಲ್ಲಿ ಪಹರೆಯನ್ನು ಮಾಡಲು ಹೊರಗುತ್ತಿಗೆ ಆಧಾರದ ಮೇಲೆ ಸೆಕ್ಯೂರಿಟಿ ಸಿಬ್ಬಂದಿಯನ್ನು ಒದಗಿಸುವ ಸಂಬಂಧ ಮೆ॥ ಪ್ರಮೋದ್ ಸೆಕ್ಯೂರಿಟಿ ಸರ್ವೀಸ್, ತುಮಕೂರು ಇವರಿಗೆ ನಾಲ್ಕು ಜನ ಸೆಕ್ಯೂರಿಟಿ ಸಿಬ್ಬಂದಿ ಒದಗಿಸಲು ದಿನಾಂಕ 23-02-2012 ರಂದು ಕಾರ್ಯಾದೇಶ ನೀಡಲಾಗಿತ್ತು. ಪ್ರಸ್ತುತ ಸ್ಥಿತಿಯಲ್ಲಿ ಅಮಾನಿಕೆರೆಯ ಸುತ್ತಲೂ ಹಾಗೂ ಉದ್ಯಾನವನಗಳಲ್ಲಿ ಸೋಲಾರ್ ಲೈಟ್, ಮಕ್ಕಳ ಆಟಿಕೆ ಸಾಮಾನುಗಳು, ಲಾನ್ ನಿರ್ಮಿಸಲಾಗಿದ್ದು, ಇವುಗಳ ಭದ್ರತೆಗಾಗಿ ಇನ್ನೂ ಆರು ಜನ ಸೆಕ್ಯೂರಿಟಿ ಸಿಬ್ಬಂದಿ ಅವಶ್ಯಕತೆ ಇರುವುದರಿಂದ ದಿನಾಂಕ 23-02-2012 ರ ಕಾರ್ಯಾದೇಶ ಮತ್ತು ಷರತ್ತುಗಳ ಮೇರೆಗೆ ಸಿಬ್ಬಂದಿಯನ್ನು ಒದಗಿಸಲು ಮೆ॥ ಪ್ರಮೋದ್ ಸೆಕ್ಯೂರಿಟಿ ಸರ್ವೀಸ್, ತುಮಕೂರು ಇವರನ್ನು ಕೋರುವ ಬಗ್ಗೆ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯುವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಅಮಾನಿಕೆರೆಯನ್ನು ದಿನಾಂಕ 12-10-2012 ರಂದು ಲೋಕಾರ್ಪಣೆ ಮಾಡುತ್ತಿದ್ದು, ಟೆಂಡರ್ ಕರೆದು ರಾತ್ರಿ ಪಾಳೆಯಕ್ಕೆ ಕಾವಲುಗಾರರನ್ನು ನೇಮಿಸಿಕೊಳ್ಳುವುದು ವಿಳಂಬವಾಗುತ್ತದೆ. ಆದುದರಿಂದ ಈಗಾಗಲೇ ಅಮಾನಿಕೆರೆಯಲ್ಲಿ ಬೆಳಗಿನ ಸಮಯದಲ್ಲಿ ಜನಗಳ ನಿತ್ಯಕರ್ಮಕ್ಕೆ ಆಗಮಿಸುವುದನ್ನು ತಪ್ಪಿಸುವುದಕ್ಕೆ ತೆಗೆದುಕೊಳ್ಳಲಾಗಿದ್ದ ಭದ್ರತಾ ಸಿಬ್ಬಂದಿ ಸೇವೆ ನೀಡುತ್ತಿರುವ ಮೆ॥ ಪ್ರಮೋದ್ ಸೆಕ್ಯೂರಿಟಿ ಸರ್ವೀಸ್‌ನಿಂದ ದಿನಾಂಕ 23-02-2012 ರಂದು ನೀಡಲಾಗಿರುವ ಆದೇಶದಲ್ಲಿನ ದರಕ್ಕೆ ಅಗತ್ಯವಿರುವ ಮೂರು ಜನ ಭದ್ರತಾ ಸಿಬ್ಬಂದಿ ಪಡೆಯಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಪ್ರಸ್ತುತ ದಿನಾಂಕ 23-09-2012 ರಿಂದ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಭದ್ರತಾ ಸಿಬ್ಬಂದಿಯ ಸೇವಾ ವೆಚ್ಚ ಭರಿಸಲೂ ಸಹ ಸಭೆಯು ಅನುಮತಿಸಿತು.

**ವಿಷಯ ಸಂಖ್ಯೆ 08** ದಿನಾಂಕ 12-10-2012 ರಂದು ತುಮಕೂರು ಅಮಾನಿಕೆರೆಯನ್ನು ಲೋಕಾರ್ಪಣೆ ಮಾಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆ ಲೋಕಾರ್ಪಣೆಗೆ ದಿನಾಂಕ ನಿಗಧಿಯಾಗಿದ್ದು, ಸದರಿ ದಿನಾಂಕದಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ

ಇತರೆ ಸನ್ಮಾನ್ಯ ಸಚಿವರುಗಳು ಸರ್ಕಾರದ ಉನ್ನತ ಅಧಿಕಾರಿಗಳು ಆಗಮಿಸುತ್ತಿದ್ದು, ಸದರಿ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆಗಳನ್ನು ಹಾಗೂ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ಪ್ರಾಧಿಕಾರವು ಭರಿಸುವುದಕ್ಕೆ ಪ್ರಾಧಿಕಾರದ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ತುಮಕೂರು ಅಮಾನಿಕೆರೆ ಲೋಕಾರ್ಪಣೆ ಪ್ರಾಧಿಕಾರದ ಅಭಿವೃದ್ಧಿ ಕಾಮಗಾರಿಗಳ ಲೋಕಾರ್ಪಣೆ ಸಾರ್ವಜನಿಕ ಕಾಮಗಾರಿಗಳ ಶಂಕುಸ್ಥಾಪನೆಗೆ ದಿನಾಂಕ ನಿಗಧಿಯಾಗಿದ್ದು, ಸದರಿ ದಿನಾಂಕದಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೆ ಸನ್ಮಾನ್ಯ ಸಚಿವರುಗಳು ಸರ್ಕಾರದ ಉನ್ನತ ಅಧಿಕಾರಿಗಳು ಆಗಮಿಸುತ್ತಿದ್ದು, ಈ ಕಾರ್ಯವನ್ನು ಕ್ರಮಬದ್ಧವಾಗಿ ನಡೆಸಲು ಅನುವಾಗುವಂತೆ ಎಲ್ಲಾ ವ್ಯವಸ್ಥೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಕೈಗೊಂಡು ಕಾರ್ಯಕ್ರಮವು ಯಶಸ್ವಿಗೊಳಿಸಲು ಎಲ್ಲರ ಸಹಕಾರವನ್ನು ಪ್ರಾಧಿಕಾರದ ಅಧ್ಯಕ್ಷರು ಸಭೆಯಲ್ಲಿ ಕೋರಿದರು. ಈ ಕಾರ್ಯಕ್ರಮದ ವಿವಿಧ ಕೆಲಸ ಕಾರ್ಯಗಳನ್ನು ಕಛೇರಿಯ ಸಿಬ್ಬಂದಿಗಳ ತಂಡ ರಚಿಸಿ, ಕಾರ್ಯನಿರ್ವಹಿಸಲು ತೀರ್ಮಾನಿಸಲಾಯಿತು. ಈ ಸಂಬಂಧ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿಯಾಗಿ ಕಾರ್ಯಕ್ರಮವನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳ ದಿನಾಂಕ ಮತ್ತು ಸಮಯವನ್ನು ನಿಗಧಿಪಡಿಸಿಕೊಂಡು ಇದೇ ರೀತಿ ಈ ಸಮಾರಂಭಕ್ಕೆ ಆಹ್ವಾನಿಸಲು ಉದ್ದೇಶಿಸಿರುವ ಕರ್ನಾಟಕ ಸರ್ಕಾರದ ಸನ್ಮಾನ್ಯ ಸಚಿವರುಗಳನ್ನು ಆಹ್ವಾನಿಸಲು ಅಧ್ಯಕ್ಷರು, ಆಯುಕ್ತರು, ಮತ್ತು ಸದಸ್ಯರು ಕ್ರಮಕೈಗೊಳ್ಳುವುದೆಂದು ಸಮಯ ನಿಗಧಿಯಾದ ನಂತರ ಆಹ್ವಾನಪತ್ರಿಕೆ ಮುದ್ರಿಸುವುದು ಇತ್ಯಾದಿ ಕಾರ್ಯಗಳನ್ನು ಕೈಗೊಳ್ಳಲು ಮತ್ತು ಇದಕ್ಕೆ ತಗಲುವ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸುವುದಕ್ಕೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 09** ಶೆಟ್ಟಿಹಳ್ಳಿ ವಸತಿ ಬಡಾವಣೆಯ ನಿವೇಶನ ಸಂಖ್ಯೆ 84-85 ಕ್ಕೆ ಸಂಬಂಧಿಸಿದಂತೆ ದಸ್ತಾವೇಜು ಮಾಡಿಕೊಡುವ ಬಗ್ಗೆ

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರದಿಂದ ಶೆಟ್ಟಿಹಳ್ಳಿ ವಸತಿ ಬಡಾವಣೆಯ ನಿವೇಶನಗಳ ಹಂಚಿಕೆ ಸಂಬಂಧ ದಿನಾಂಕ 07-02-1994 ರಂದು ಪ್ರಕಟಣೆ ನೀಡಲಾಗಿತ್ತು. ಶ್ರೀ ತಾನಾಜಿ ಬಿನ್ ಬಾಪೂರಾವ್ ಖಂಡಾರೆ ಎಂಬುವವರು ಅರ್ಜಿ ಸಂಖ್ಯೆ 627 ರಲ್ಲಿ ರೂ.9,000 ಗಳ ಪ್ರಾರಂಭಿಕ ಠೇವಣಿಯನ್ನು ಸಲ್ಲಿಸಿ, ಸಲ್ಲಿಸಿಕೊಂಡಿದ್ದ ಅರ್ಜಿಯು ಪುರಸ್ಕೃತಗೊಂಡ ಮೇರೆಗೆ ದಿನಾಂಕ 05-08-1994 ರಲ್ಲಿ ಕ್ರಮಾಂಕ ಟಿಯುಡಿಎ/ನಿವಿಶೆ/01/1993-94 ರಂತೆ ನಿವೇಶನ ಹಂಚಿಕೆ ತಿಳುವಳಿಕೆ ಪತ್ರವನ್ನು ಆರ್.ಪಿ.ಎ.ಡಿ.ಮೂಲಕ ರವಾನಿಸಲಾಗಿತ್ತು. ಉಳಿಕೆ ಮೊಬಲಗನ್ನು ದಿನಾಂಕ 17-10-1994 ರಂದು ಪ್ರಾಧಿಕಾರದ ಖಾತೆಗೆ ಜಮೆ ಮಾಡಿರುತ್ತಾರೆ. ದಿನಾಂಕ 24-08-2012 ರಂದು ಅರ್ಜಿದಾರರು ಮನವಿ

ಸಲ್ಲಿಸಿ, ಸದರಿ ನಿವೇಶನಕ್ಕೆ ಸಂಬಂಧಿಸಿದಂತೆ ದಸ್ತಾವೇಜು ಮಾಡಿಕೊಡಬೇಕೆಂದು ಕೋರಿರುತ್ತಾರೆ. ಅಸಾದಾರಣ ವಿಳಂಬವಾಗಿದ್ದು, ನಿಯುವುಗಳಲ್ಲಿ ಅವಕಾಶವಿರುವುದಿಲ್ಲ. ಅರ್ಜಿದಾರರು ನಿಗಧಿತ ಸಮಯಕ್ಕೆ ಹಣ ಪಾವತಿಸಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಿಂದ ಶೆಟ್ಟಿಹಳ್ಳಿ ವಸತಿ ಬಡಾವಣೆಯ ನಿವೇಶನಗಳ ಹಂಚಿಕೆ ಸಂಬಂಧ ದಿನಾಂಕ 07-02-1994 ರಂದು ಪ್ರಕಟಣೆ ನೀಡಲಾಗಿತ್ತು. ಶ್ರೀ ತಾನಾಜಿ ಬಿನ್ ಬಾಪೂರಾವ್ ಖಂಡಾರೆ ಎಂಬುವವರು ಅರ್ಜಿ ಸಂಖ್ಯೆ 627 ರಲ್ಲಿ ರೂ.9,000 ಗಳ ಪ್ರಾರಂಭಿಕ ಠೇವಣಿಯನ್ನು ಸಲ್ಲಿಸಿ, ಸಲ್ಲಿಸಿಕೊಂಡಿದ್ದ ಅರ್ಜಿಯು ಪುರಸ್ಕೃತಗೊಂಡ ಮೇರೆಗೆ ದಿನಾಂಕ 05-08-1994 ರಲ್ಲಿ ಕ್ರಮಾಂಕ ಟಿಯುಡಿಎ/ ನಿವಿಹೆ/01/1993-94 ರಂತೆ ನಿವೇಶನ ಹಂಚಿಕೆ ತಿಳುವಳಿಕೆ ಪತ್ರವನ್ನು ಆರ್.ಪಿ.ಎ.ಡಿ.ಮೂಲಕ ರವಾನಿಸಲಾಗಿತ್ತು. ಉಳಿಕೆ ಮೊಬಲಗನ್ನು ದಿನಾಂಕ 17-10-1994 ರಂದು ಪ್ರಾಧಿಕಾರದ ಖಾತೆಗೆ ಜಮೆ ಮಾಡಿರುತ್ತಾರೆ. ದಿನಾಂಕ 24-08-2012 ರಂದು ಅರ್ಜಿದಾರರು ಮನವಿ ಸಲ್ಲಿಸಿ, ಸದರಿ ನಿವೇಶನಕ್ಕೆ ಸಂಬಂಧಿಸಿದಂತೆ ದಸ್ತಾವೇಜು ಮಾಡಿಕೊಡಬೇಕೆಂದು ಕೋರಿದ್ದು, ನಿಯಮಾನುಸಾರ ಈಗಾಗಲೇ ನಿಗಧಿತ ಸಮಯ ಮುಕ್ತಾಯವಾಗಿರುವುದರಿಂದ ದಸ್ತಾವೇಜು ನೊಂದಣಿ ಮಾಡಿಕೊಡಲು ನಿಯಮಗಳಲ್ಲಿ ಅವಕಾಶವಿಲ್ಲವೆಂಬ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು. ಆದರೆ ಹಂಚಿಕೆದಾರರು ನಿಗಧಿತ ಕಾಲಮಿತಿಯೊಳಗೆ ನಿವೇಶನದ ಪೂರ್ಣ ಮೊತ್ತವನ್ನು ಪಾವತಿಸಿದ್ದು, ಅನಿವಾರ್ಯ ಕಾರಣಗಳಿಂದ ದಸ್ತಾವೇಜು ನೊಂದಣಿ ಮಾಡಿಸಿಕೊಳ್ಳುವುದಲ್ಲಿ ಮಾತ್ರ ವಿಳಂಬವಾಗಿರುತ್ತದೆ ಮತ್ತು ಯಾವುದೇ ಮೊತ್ತ ಬಾಕಿ ಇಲ್ಲದ ಕಾರಣ ನಿವೇಶನದ ಹಂಚಿಕೆದಾರರ ಕೋರಿಕೆಯಂತೆ ದಸ್ತಾವೇಜನ್ನು ನೊಂದಣಿ ಮಾಡಿಕೊಡಲು ಸಭೆಯು ಬಹುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 10** ತುಮಕೂರು ನಗರದ ಕಸಬಾ ಗ್ರಾಮದ ಸರ್ವೆ ನಂಬರ್ 268/1ಎ ರಲ್ಲಿ ವಿಸ್ತೀರ್ಣ 0-19.08 ಗುಂಟೆ ಪ್ರದೇಶದಲ್ಲಿ ಖಾಸಗಿ ವಸತಿ ವಿನ್ಯಾಸದಲ್ಲಿ ಉಳಿದಿರುವ ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ತುಮಕೂರು ನಗರದ ಕಸಬಾ ಗ್ರಾಮದ ಸರ್ವೆ ನಂಬರ್ 268/1ಎ ರಲ್ಲಿ ವಿಸ್ತೀರ್ಣ 0-19.08 ಗುಂಟೆ ಜಮೀನಿಗೆ ಪ್ರಾಧಿಕಾರದ ದಿನಾಂಕ 21-05-2011 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 67 ರ ನಿರ್ಣಯದನ್ವಯ ಸದರಿ ಜಮೀನಿಗೆ ವಿನ್ಯಾಸ ಅನುಮೋದನೆ ನೀಡಿ ಈ ಕಛೇರಿಯ ವಿನ್ಯಾಸ ಅನುಮೋದನೆ ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/50/2011-12 ದಿನಾಂಕ 01-10-2011 ರನ್ವಯ

ಶೇಕಡ 60 ರಷ್ಟು ನಿವೇಶನಗಳನ್ನು ಅರ್ಜಿದಾರರಾದ ಶ್ರೀ ಟಿ.ವಿ.ಚಂದ್ರಪ್ಪ ಇವರ ಹೆಸರಿಗೆ ಬಿಡುಗಡೆ ಮಾಡಲಾಗಿದ್ದು, ಅರ್ಜಿದಾರರು ನಿರ್ವಹಿಸಬೇಕಾದ ಅಗತ್ಯ ಕಾಮಗಾರಿಗಳನ್ನು ನಿರ್ವಹಿಸಲು ಈ ಕಛೇರಿಯ ಕಾರ್ಯಾದೇಶ ಸಂಖ್ಯೆ ತುನಪ್ರಾ/ಸಕಾಇ/ಎಲ್ಎಒ/50/2011-12 ದಿನಾಂಕ 13-08-2012 ರಂದು ಕಾರ್ಯಾದೇಶ ನೀಡಲಾಗಿದ್ದು. ಡಾಂಬರೀಕರಿಸಿದ ರಸ್ತೆ, ಕಲ್ಲು ಚಪ್ಪಡಿ ಚರಂಡಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ವಿದ್ಯುತ್ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಿದ್ದು, ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದೆಂದು ಈ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು ವರದಿ ನೀಡಿದ್ದು, ಸದರಿ ವರದಿಯನ್ವಯ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಪ್ರಾಧಿಕಾರದ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಪ್ರಸ್ತಾವಿತ ಪ್ರದೇಶದ ಸ್ಥಳ ಪರಿಶೀಲನೆ ಮಾಡಲಾಯಿತು ಹಾಗೂ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ವಸತಿ ವಿನ್ಯಾಸದ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುವ ಕಾರಣ ಅಂತಿಮ ಅನುಮೋದನೆಗೆ ಸಿದ್ದಪಡಿಸಿರುವ ವಿನ್ಯಾಸದಂತೆ ನಿವೇಶನಗಳನ್ನು ರಚಿಸಲಾಗಿರುತ್ತದೆ. ಆದ್ದರಿಂದ ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದು.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಪ್ರಾಧಿಕಾರದ ತಾಂತ್ರಿಕ ಶಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಶ್ರೀ ಟಿ.ವಿ.ಚಂದ್ರಪ್ಪ ಎಂಬುವವರ ಹೆಸರಿಗೆ ತುಮಕೂರು ನಗರದ ಕಸಬಾ ಗ್ರಾಮದ ಸರ್ವೆ ನಂಬರ್ 268/1ಎ ರಲ್ಲಿ ವಿಸ್ತೀರ್ಣ 0-19.08 ಗುಂಟೆ ಜಮೀನಿಗೆ ನೀಡಲಾಗಿರುವ ವಿನ್ಯಾಸ ಅನುಮೋದನೆ ಸಂಬಂಧ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಅಂಶಗಳನ್ನು ಪರಿಗಣಿಸಲು ಡಾಂಬರೀಕರಿಸಿದ ರಸ್ತೆ, ಚರಂಡಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ರಸ್ತೆಗಳ ದಾನಪತ್ರ, ವಿದ್ಯುತ್ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಿದ್ದು, ಪ್ರಾಥಮಿಕ ವಿನ್ಯಾಸದಲ್ಲಿ ಉಳಿದಿರುವ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಿ, ಸದರಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇತರೆ ವಿಷಯಗಳು**

* * * *

**ವಿಷಯ ಸಂಖ್ಯೆ 11** ತುಮಕೂರು ಅಮಾನಿಕೆರೆಯ ಮುಖ್ಯ ಪ್ರವೇಶದ್ವಾರದಲ್ಲಿ 4 ಸಂಖ್ಯೆ ನವಿಲು ಮಾದರಿಯ ವಿದ್ಯುತ್ ದೀಪಗಳನ್ನು ಸರಬರಾಜು ಮಾಡಿ ಅಳವಡಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆಯ ಮುಖ್ಯ ಪ್ರವೇಶದ್ವಾರದಲ್ಲಿ 4 ಸಂಖ್ಯೆ ನವಿಲು ಮಾದರಿಯ ವಿದ್ಯುತ್ ದೀಪಗಳನ್ನು ಸರಬರಾಜು ಮಾಡಿ ಅಳವಡಿಸುವ ಸಂಬಂಧ ಕೊಟೇಷನ್ ಆಹ್ವಾನಿಸಲಾಗಿದ್ದು, ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟಣೆ ನೀಡಲಾಗಿರುತ್ತದೆ. ಕೋಟೇಷನ್ ಪ್ರಕಟಣೆಯನ್ನು ಅನುಸರಿಸಿ ಈ ಕೆಳಕಂಡವರು ದರಪಟ್ಟಿಗಳನ್ನು ಸಲ್ಲಿಸಿರುತ್ತಾರೆ.

1. ಮೆ॥ ಮ್ಯಾಗ್ ಎಂಟರ್‌ಪ್ರೈಸೆಸ್, ಬೆಂಗಳೂರು ರೂ.24,200.00 (1 ಸಂಖ್ಯೆ)
2. ಮೆ॥ ಓಂಸಾಯಿ ಫೈಬರ್‌ಗ್ಲಾಸ್, ಬೆಂಗಳೂರು ರೂ.24,300.00 (1 ಸಂಖ್ಯೆ)
3. ಮೆ॥ ರತ್ನ ಎಂಟರ್‌ಪ್ರೈಸೆಸ್, ಬೆಂಗಳೂರು ರೂ.24,500.00 (1 ಸಂಖ್ಯೆ)

ಮೇಲ್ಕಂಡ ದರಗಳಲ್ಲಿ ಮೆ॥ ಮ್ಯಾಗ್ ಎಂಟರ್‌ಪ್ರೈಸೆಸ್, ಬೆಂಗಳೂರು ಇವರು ಕಡಿಮೆ ದರ ಅಂದರೆ ಒಂದು ವಿದ್ಯುತ್ ದೀಪಕ್ಕೆ ರೂ.24,200.00 ಗಳನ್ನು ನಮೂದಿಸಿದ್ದು, ಈ ದರಗಳನ್ನು ಅನುಮೋದಿಸಿ ಒಟ್ಟು ನಾಲ್ಕು ಸಂಖ್ಯೆ ವಿದ್ಯುತ್ ದೀಪಗಳನ್ನು ಸರಬರಾಜು ಮಾಡಿ ಅಳವಡಿಸಲು ಒಟ್ಟು ಮೊತ್ತ ರೂ.96,800 ಗಳಿಗೆ ದಿನಾಂಕ 03-09-2012 ರಂದು ಕಾರ್ಯದೇಶ ನೀಡಲಾಗಿರುತ್ತದೆ. ಸದರಿ ವಿಷಯವನ್ನು ಘಟನೋತ್ತರ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ಅಮಾನಿಕೆರೆಯ ಮುಖ್ಯ ಪ್ರವೇಶದ್ವಾರದಲ್ಲಿ 4 ಸಂಖ್ಯೆ ನವಿಲು ಮಾದರಿಯ ವಿದ್ಯುತ್ ದೀಪಗಳನ್ನು ಸರಬರಾಜು ಮಾಡಿ ಅಳವಡಿಸುವ ಸಂಬಂಧ ಮೆ॥ ಮ್ಯಾಗ್ ಎಂಟರ್‌ಪ್ರೈಸೆಸ್, ಬೆಂಗಳೂರು ಇವರು ಕಡಿಮೆ ದರ ಅಂದರೆ ಒಂದು ವಿದ್ಯುತ್ ದೀಪಕ್ಕೆ ರೂ.24,200.00 ಗಳನ್ನು ನಮೂದಿಸಿದ್ದು, ಈ ದರವು ಅತ್ಯಂತ ಕಡಿಮೆ ದರವಾಗಿದ್ದು, ಸದರಿ ಸಂಸ್ಥೆಗೆ ಒಟ್ಟು ನಾಲ್ಕು ಸಂಖ್ಯೆ ವಿದ್ಯುತ್ ದೀಪಗಳನ್ನು ಸರಬರಾಜು ಮಾಡಲು ನೀಡಿರುವ ಕಾರ್ಯಾದೇಶಕ್ಕೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು.

**ವಿಷಯ ಸಂಖ್ಯೆ 12** ತುಮಕೂರು ಅಮಾನಿಕೆರೆಯ ಬೆಂಗಳೂರು ರಸ್ತೆಯ ಬಂಡ್ ಭಾಗದಲ್ಲಿ ವಾಕ್‌ಪಾತ್ ಪಕ್ಕದಲ್ಲಿ ಮೂರು ಅಡಿ ಎತ್ತರದ ಅಲಂಕಾರಿಕ 47 ಸಂಖ್ಯೆ ವಿದ್ಯುತ್ ದೀಪಗಳನ್ನು ಸರಬರಾಜು ಮಾಡಿ ಅಳವಡಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆಯ ಬೆಂಗಳೂರು ರಸ್ತೆಯ ಬಂಡ್ ಭಾಗದಲ್ಲಿ ವಾಕ್‌ಪಾತ್ ಪಕ್ಕದಲ್ಲಿ ಮೂರು ಅಡಿ ಎತ್ತರದ ಅಲಂಕಾರಿಕ 47 ಸಂಖ್ಯೆ ವಿದ್ಯುತ್ ದೀಪಗಳನ್ನು ಸರಬರಾಜು ಮಾಡಿ ಅಳವಡಿಸುವ ಸಂಬಂಧ ಕೊಟೇಷನ್ ಆಹ್ವಾನಿಸಲಾಗಿದ್ದು, ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟಣೆ ನೀಡಲಾಗಿರುತ್ತದೆ. ಕೋಟೇಷನ್ ಪ್ರಕಟಣೆಯನ್ನು ಅನುಸರಿಸಿ ಈ ಕೆಳಕಂಡವರು ದರಪಟ್ಟಿಗಳನ್ನು ಸಲ್ಲಿಸಿರುತ್ತಾರೆ.

1. ಮೆ॥ ಮ್ಯಾಗ್ ಎಂಟರ್‌ಪ್ರೈಸೆಸ್, ಬೆಂಗಳೂರು ರೂ.1,600.00 (1 ಸಂಖ್ಯೆ)
2. ಮೆ॥ ಓಂಸಾಯಿ ಫೈಬರ್‌ಗ್ಲಾಸ್, ಬೆಂಗಳೂರು ರೂ.1,700.00 (1 ಸಂಖ್ಯೆ)
3. ಮೆ॥ ರತ್ನ ಎಂಟರ್‌ಪ್ರೈಸೆಸ್, ಬೆಂಗಳೂರು ರೂ.1,700.00 (1 ಸಂಖ್ಯೆ)

ಮೇಲ್ಕಂಡ ದರಗಳಲ್ಲಿ ಮೆ॥ ಮ್ಯಾಗ್ ಎಂಟರ್‌ಪ್ರೈಸೆಸ್, ಬೆಂಗಳೂರು ಇವರು ಕಡಿಮೆ ದರ ಅಂದರೆ ಒಂದು ವಿದ್ಯುತ್ ದೀಪಕ್ಕೆ ರೂ.1,600.00 ಗಳನ್ನು ನಮೂದಿಸಿದ್ದು, ಈ ದರಗಳನ್ನು ಅನುಮೋದಿಸಿ ಒಟ್ಟು ನಲವತ್ತು ಸಂಖ್ಯೆ ವಿದ್ಯುತ್ ದೀಪಗಳನ್ನು ಸರಬರಾಜು ಮಾಡಿ ಅಳವಡಿಸಲು ಒಟ್ಟು ಮೊತ್ತ ರೂ.64,000 ಗಳಿಗೆ ದಿನಾಂಕ 03-09-2012 ರಂದು ಕಾರ್ಯದೇಶ ನೀಡಲಾಗಿರುತ್ತದೆ. ಸದರಿ ವಿಷಯವನ್ನು ಘಟನೋತ್ತರ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ಅಮಾನಿಕೆರೆಯ ಬೆಂಗಳೂರು ರಸ್ತೆಯ ಬಂಡ್ ಭಾಗದಲ್ಲಿ ವಾಕ್‌ಪಾತ್ ಪಕ್ಕದಲ್ಲಿ ಮೂರು ಅಡಿ ಎತ್ತರದ ಅಲಂಕಾರಿಕ 47 ಸಂಖ್ಯೆ ವಿದ್ಯುತ್ ದೀಪಗಳನ್ನು ಸರಬರಾಜು ಮಾಡಿ ಅಳವಡಿಸುವ ಸಂಬಂಧ ಮೆ॥ ಮ್ಯಾಗ್ ಎಂಟರ್‌ಪ್ರೈಸೆಸ್, ಬೆಂಗಳೂರು ಇವರು ಕಡಿಮೆ ದರ ಅಂದರೆ ಒಂದು ವಿದ್ಯುತ್ ದೀಪಕ್ಕೆ ರೂ.1,600.00 ಗಳನ್ನು ನಮೂದಿಸಿದ್ದು, ಈ ದರವು ಅತ್ಯಂತ ಕಡಿಮೆ ದರವಾಗಿದ್ದು, ಸದರಿ ಸಂಸ್ಥೆಗೆ ಒಟ್ಟು ನಲವತ್ತೇಳು ಸಂಖ್ಯೆ ವಿದ್ಯುತ್ ದೀಪಗಳನ್ನು ಸರಬರಾಜು ಮಾಡಲು ನೀಡಿರುವ ಕಾರ್ಯಾದೇಶಕ್ಕೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು.

**ವಿಷಯ ಸಂಖ್ಯೆ 13** ತುಮಕೂರು ಅಮಾನಿಕೆರೆಯ ಬೆಂಗಳೂರು ರಸ್ತೆಯ ಬಂಡ್ ಭಾಗದಲ್ಲಿ ವಾಕ್‌ಪಾತ್ ಪಕ್ಕದಲ್ಲಿ 550 ಮೀಟರ್ ಉದ್ದ ಅಳತೆಗೆ 2" ಪಿ.ವಿ.ಸಿ.ಪೈಪು ನಲ್ಲಿ 4 Core 16 Sq.mm Cable ನ್ನು ಸರಬರಾಜು ಮಾಡಿ ಅಳವಡಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಅಮಾನಿಕೆರೆಯನ್ನು ದಿನಾಂಕ 12-10-2012 ರಂದು ಲೋಕಾರ್ಪಣೆ ಮಾಡಿರುತ್ತಿರುವ ಕಾರಣ ಈ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕಿರುತ್ತದೆ. ಆದುದರಿಂದ ತುಮಕೂರು ಅಮಾನಿಕೆರೆಯ ಬೆಂಗಳೂರು ರಸ್ತೆಯ ಬಂಡ್ ಭಾಗದಲ್ಲಿ ವಾಕ್‌ಪಾತ್ ಪಕ್ಕದಲ್ಲಿ 550 ಮೀಟರ್ ಉದ್ದ ಅಳತೆಗೆ 2" ಪಿ.ವಿ.ಸಿ.ಪೈಪು ನಲ್ಲಿ 4 Core 16 Sq.mm Cable ನ್ನು ಸರಬರಾಜು ಮಾಡಿ ಅಳವಡಿಸುವ ಸಂಬಂಧ ಕೊಟೇಷನ್ ಆಹ್ವಾನಿಸಲಾಗಿದ್ದು, ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟಣೆ ನೀಡಲಾಗಿರುತ್ತದೆ. ಕೋಟೇಷನ್ ಪ್ರಕಟಣೆಯನ್ನು ಅನುಸರಿಸಿ ಈ ಕೆಳಕಂಡವರು ದರಪಟ್ಟಿಗಳನ್ನು ಸಲ್ಲಿಸಿರುತ್ತಾರೆ.

1. ಮೆ॥ ಲೋಕಾಂಬ ಎಲೆಕ್ಟ್ರಿಕಲ್ಸ್, ಕ್ಯಾತ್ಸಂದ್ರ ರೂ.120/- 1 ಮೀಟರ್‌ಗೆ
2. ಮೆ॥ ಗಾಯಿತ್ರಿ ಎಲೆಕ್ಟ್ರಿಕಲ್ಸ್, ತುಮಕೂರು ರೂ.150/- 1 ಮೀಟರ್‌ಗೆ
3. ಮೆ॥ ಎಸ್.ಎಮ್.ಎಲೆಕ್ಟ್ರಿಕಲ್ಸ್, ತುಮಕೂರು ರೂ.150/- 1 ಮೀಟರ್‌ಗೆ

ಮೇಲ್ಕಂಡ ದರಗಳಲ್ಲಿ ಮೆ॥ ಲೋಕಾಂಬ ಎಲೆಕ್ಟ್ರಿಕಲ್ಸ್, ಕ್ಯಾತ್ಸಂದ್ರ ಇವರು ಕಡಿಮೆ ದರ ಅಂದರೆ ಒಂದು ಮೀಟರ್ ಕೇಬಲ್‌ಗೆ ರೂ.120/- ಗಳನ್ನು ನಮೂದಿಸಿದ್ದು, ಈ ದರಗಳನ್ನು ಅನುಮೋದಿಸಿ ಒಟ್ಟು 550 ಮೀಟರ್ ಉದ್ದ ಅಳತೆಗೆ ಸರಬರಾಜು ಮಾಡಿ ಅಳವಡಿಸಲು ಒಟ್ಟು ಮೊತ್ತ ರೂ.99,950 ಗಳಿಗೆ ದಿನಾಂಕ 05-09-2012 ರಂದು ಕಾರ್ಯದೇಶ ನೀಡಲಾಗಿರುತ್ತದೆ. ಸದರಿ ವಿಷಯವನ್ನು ಘಟನೋತ್ತರ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ಅಮಾನಿಕೆರೆಯ ಬೆಂಗಳೂರು ರಸ್ತೆಯ ಬಂಡ್ ಭಾಗದಲ್ಲಿ ವಾಕ್‌ಪಾತ್ ಪಕ್ಕದಲ್ಲಿ 550 ಮೀಟರ್ ಉದ್ದ ಅಳತೆಗೆ 2" ಪಿ.ವಿ.ಸಿ.ಪೈಪು ನಲ್ಲಿ 4 Core 16 Sq.mm Cable ನ್ನು ಸರಬರಾಜು ಮಾಡಿ ಅಳವಡಿಸುವ ಸಂಬಂಧ ಮೆ॥ ಲೋಕಾಂಬ ಎಲೆಕ್ಟ್ರಿಕಲ್ಸ್, ಕ್ಯಾತ್ಸಂದ್ರ ಇವರು ಕಡಿಮೆ ದರ ಅಂದರೆ ಒಂದು ಮೀಟರ್ ಕೇಬಲ್‌ಗೆ ರೂ.120.00 ಗಳನ್ನು ನಮೂದಿಸಿದ್ದು, ಈ ದರವು ಅತ್ಯಂತ ಕಡಿಮೆ ದರವಾಗಿದ್ದು, ಸದರಿ ಸಂಸ್ಥೆಗೆ ಒಟ್ಟು 550 ಮೀಟರ್ ಉದ್ದ ಅಳತೆಗೆ ಸರಬರಾಜು ಮಾಡಿ ಅಳವಡಿಸಲು ನೀಡಿರುವ ಕಾರ್ಯಾದೇಶಕ್ಕೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು.

**ವಿಷಯ ಸಂಖ್ಯೆ 14** ತುಮಕೂರು ಅಮಾನಿಕೆರೆಯಲ್ಲಿ ಬೆಳೆದಿರುವ ಹುಲ್ಲು ಮತ್ತು ಗಿಡಗಳನ್ನು ತೆಗೆಸುವ ಸಂಬಂಧ

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆಯನ್ನು ದಿನಾಂಕ 12-10-2012 ರಂದು ಲೋಕಾರ್ಪಣೆ ಮಾಡಲು ದಿನಾಂಕ ನಿಗಧಿಯಾಗಿದ್ದು, ಸದರಿ ಅಮಾನಿಕೆರೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಲಿದ್ದು, ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಅಮಾನಿಕೆರೆ ಕೆರೆಯಲ್ಲಿ ಬೆಳೆದಿರುವ ಹುಲ್ಲು ಮತ್ತು ಗಿಡಗಳನ್ನು ಸ್ವಚ ಮಾಡಲು ಕ್ರಮಕೈಗೊಳ್ಳಲು ಸೂಚಿಸಿದ್ದರ ಮೇರೆಗೆ ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುತ್ತದೆ. ಹಿಂದೆ ಅಮಾನಿಕೆರೆಯಲ್ಲಿ ಬೆಳೆದಿದ್ದ ಹುಲ್ಲನ್ನು ನೀರು ನಿಂತಿಲ್ಲದ ಭಾಗದಲ್ಲಿ ಜೆ.ಸಿ.ಬಿ.ಯಿಂದ ತೆಗೆಸಲಾಗಿದೆ. ನೀರು ನಿಂತಿರುವ ಭಾಗಗಳಲ್ಲಿ ಬಹಳ ಎತ್ತರಕ್ಕೆ ಹುಲ್ಲು ಬೆಳೆದಿದ್ದು, ವೀಕ್ಷಣೆಗೆ ಕೆಟ್ಟದಾಗಿ ಕಾಣುತ್ತಿದೆ. ಪುಸ್ತುತ ಹೇಮಾವತಿ ನೀರನ್ನು ಅಮಾನಿಕೆರೆಗೆ ಪೈಪ್‌ಲೈನ್ ಮೂಲಕ ದಿನಾಂಕ 24-09-2012 ರಿಂದ ಬಿಡಲಾಗುತ್ತಿದ್ದು, ಸದರಿ ಹುಲ್ಲನ್ನು ತೆಗೆಸದಿದ್ದಲ್ಲಿ ಬಿಡಲಾಗುತ್ತಿರುವ ನೀರಿನ

ಪ್ರಯೋಜನವಾಗುವುದಿಲ್ಲ. ನೀರು ನಿಂತಿದ್ದ ಭಾಗದಲ್ಲಿ ಜೆ.ಸಿ.ಬಿ.ಯಿಂದ ಹಿಂದೆ ಹುಲ್ಲನ್ನು ತೆಗೆಯಲು ಸಾಧ್ಯವಾಗದ ಕಾರಣ, ನಿಯಮಾನುಸಾರ ಕ್ರಮಕೈಗೊಂಡು ಕೆಲಸಗಾರರಿಂದ ಸದರಿ ಹುಲ್ಲನ್ನು ತೆಗೆಸಬೇಕಿರುತ್ತದೆ. ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ಅಮಾನಿಕೆರೆಯನ್ನು ದಿನಾಂಕ 12-10-2012 ರಂದು ಲೋಕಾರ್ಪಣೆ ಮಾಡಲು ದಿನಾಂಕ ನಿಗಧಿಯಾಗಿದ್ದು, ಸದರಿ ಅಮಾನಿಕೆರೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಲಿದ್ದು, ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಅಮಾನಿಕೆರೆ ಕೆರೆಯಲ್ಲಿ ಬೆಳೆದಿರುವ ಹುಲ್ಲು ಮತ್ತು ಗಿಡಗಳನ್ನು ಸ್ವಚ ಮಾಡಲು ಕ್ರಮಕೈಗೊಳ್ಳಲು ಸೂಚಿಸಿದ್ದರ ಮೇರೆಗೆ ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುತ್ತದೆ. ಹಾಲಿ ನೀರು ನಿಂತಿರುವ ಭಾಗದಲ್ಲಿ ಬೆಳೆದಿರುವ ಜೆಂಡ್ ಮತ್ತು ಹುಲ್ಲನ್ನು ಜೆ.ಸಿ.ಬಿ.ಯಂತ್ರದಿಂದ ತೆಗೆಸಲು ಸಾಧ್ಯವಿಲ್ಲದ ಕಾರಣ ಸದರಿ ಕಾಮಗಾರಿಯನ್ನು ಕೆಲಸಗಾರರಿಂದ ತೆಗೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 15** ತುಮಕೂರು ಅಮಾನಿಕೆರೆಯಲ್ಲಿ ಮಕ್ಕಳ ಆಟದ ಪ್ರದೇಶಕ್ಕೆ ಮರಳು ಮತ್ತು Kerb Stone ಹಾಕಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆಯಲ್ಲಿ ಮಕ್ಕಳ ಆಟದ ಪ್ರದೇಶಕ್ಕೆ ಮರಳು ಮತ್ತು Kerb Stone ಹಾಕಿಸುವ ಸಂಬಂಧ ತುಮಕೂರು ಅಮಾನಿಕೆರೆಯನ್ನು ದಿನಾಂಕ 12-10-2012 ರಂದು ಲೋಕಾರ್ಪಣೆ ಮಾಡಲು ದಿನಾಂಕ ನಿಗಧಿಯಾಗಿದ್ದು, ಸದರಿ ಅಮಾನಿಕೆರೆಯ ಉದ್ಘಾಟನಾ ಕಾರ್ಯಕ್ರಮಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಲಿರುತ್ತಾರೆ. ಆದ್ದರಿಂದ ತುಮಕೂರು ಅಮಾನಿಕೆರೆಯಲ್ಲಿ ಮಕ್ಕಳ ಆಟದ ಪ್ರದೇಶಕ್ಕೆ ಮರಳು ಮತ್ತು Kerb Stone ಹಾಕಿಸಬೇಕಾಗಿದ್ದು, ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುತ್ತದೆ. ಆದುದರಿಂದ ಮಕ್ಕಳ ಆಟದ ಪ್ರದೇಶದ ಸುತ್ತ Kerb Stone ಅಳವಡಿಸಿ, ಮರಳನ್ನು ಹಾಕಲು ಕೋಟೇಷನ್ ಮುಖಾಂತರ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಅಮಾನಿಕೆರೆ ಉದ್ಘಾಟನೆಯು ದಿನಾಂಕ 12-10-2012 ರಂದು ನಿರ್ಧಾರವಾಗಿದ್ದು, ಹೆಚ್ಚಿನ ಕಾಲಾವಕಾಶವಿಲ್ಲದ ಕಾರಣ ಅನಿವಾರ್ಯವಾಗಿರುವ ಕೆಲಸಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವುದು ಅಗತ್ಯವಾಗಿರುತ್ತದೆ. ಆದುದರಿಂದ ತುಮಕೂರು ಅಮಾನಿಕೆರೆಯಲ್ಲಿ ಮಕ್ಕಳ ಆಟದ ಪ್ರದೇಶಕ್ಕೆ ಮರಳು ಮತ್ತು Kerb Stone

ಹಾಕಿಸುವ ಸಂಬಂಧ ಕೋಟೇಷನ್ ಮುಖಾಂತರ ಸದರಿ ಕಾಮಗಾರಿಯನ್ನು ನಿಯಮಾನುಸಾರ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 16** ತುಮಕೂರು ಅಮಾನಿಕೆರೆಯ ಮುಖ್ಯ ಪ್ರವೇಶದ್ವಾರಕ್ಕೆ ನಾಮಫಲಕ ಅಳವಡಿಸುವ ಕಾಮಗಾರಿ ತೆಗೆದುಕೊಳ್ಳುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆಯ ಮುಖ್ಯ ಪ್ರವೇಶದ್ವಾರದ ನಾಮಫಲಕಕ್ಕೆ ಎಸಿಪಿ ವರ್ಕ್ಸ್ ಮತ್ತು ಸ್ಟೈನ್‌ಲೇಸ್ ಸ್ಟೀಲ್ ಲೆಟರಿಂಗ್ಸ್ ಅಳವಡಿಸುವ ಕಾಮಗಾರಿಯನ್ನು ನಿರ್ಮಿತಿ ಕೇಂದ್ರ, ತುಮಕೂರು ಇವರಿಗೆ ವಹಿಸಲಾಗಿದ್ದು, ಈ ಕೆಳಕಂಡ ಅಂದಾಜು ಪಟ್ಟಿಗಳನ್ನು ದಿನಾಂಕ 13-09-2012 ರಂದು ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಿರುತ್ತಾರೆ.

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1. | Providing and fixing 4 mm thick Acp work for Name Board Entrance Gate at Amanikere in Tumkur Town. | 0.96 |
| 2. | Providing and fixing Steel letter for Name Board Entrance Gate at Amanikere in Tumkur Town. | 0.95 |
| | **Total** | **1.91** |

ಈ ಮೇಲ್ಕಂಡ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಳ್ಳುವ ಸಲುವಾಗಿ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ನಿರ್ಮಿತಿ ಕೇಂದ್ರ, ತುಮಕೂರು ರವರು ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಿರುತ್ತಾರೆ. ಈ ಸಂಬಂಧ ದಿನಾಂಕ 21-09-2012 ರಂದು ಪತ್ರ ಮುಖೇನ ಅನುದಾನ ಬಿಡುಗಡೆಮಾಡಲು ಕೋರಿರುತ್ತಾರೆ. ಅದರಂತೆ ನಿರ್ಮಿತಿ ಕೇಂದ್ರ, ತುಮಕೂರು ಇವರಿಗೆ ರೂ.1.91 ಲಕ್ಷಗಳ ಮೊತ್ತವನ್ನು ಪಾವತಿಸಲು ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ಅಮಾನಿಕೆರೆಯ ಮುಖ್ಯ ಪ್ರವೇಶದ್ವಾರದ ನಾಮಫಲಕಕ್ಕೆ ಎಸಿಪಿ ವರ್ಕ್ಸ್ ಮತ್ತು ಸ್ಟೈನ್‌ಲೇಸ್ ಸ್ಟೀಲ್ ಲೆಟರಿಂಗ್ಸ್ ಅಳವಡಿಸುವ ಕಾಮಗಾರಿಯನ್ನು ತುರ್ತಾಗಿ

ಪೂರ್ಣಗೊಳಿಸಬೇಕಾಗಿರುವುದರಿಂದ ಸದರಿ ಕಾಮಗಾರಿಯನ್ನು ನಿರ್ಮಿತಿ ಕೇಂದ್ರ, ತುಮಕೂರು ಇವರಿಂದ ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುವುದರಿಂದ ಸದರಿ ಕಾಮಗಾರಿಯನ್ನು ಕೈಗೊಳ್ಳಲು ರೂ.1.91 ಲಕ್ಷಗಳ ಮುಂಗಡ ಮೊತ್ತವನ್ನು ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 17** ಪ್ರಾಧಿಕಾರದ ಸ್ಥಳಿಯ ಟೆಂಡರ್ ಪ್ರಕಟಣೆ ಸಂಖ್ಯೆ ಟಿಯುಡಿಎ/ಟೆಂಡರ್/ಸಕಾಇ/14/2012-13 ದಿನಾಂಕ 07-09-2012 ರಂದು ಕರೆದಿರುವ ಕಾಮಗಾರಿಗಳ ಟೆಂಡರ್ ಅನುಮೋದಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರದ ಗೋಕುಲ ಬಡಾವಣೆಯ ಉದ್ಯಾನವನಕ್ಕೆ ಹೊಸದಾಗಿ ಕೊರೆದಿರುವ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿ ಹಾಗೂ ತುಮಕೂರು ನಗರದ ಸಿದ್ದರಾಮೇಶ್ವರ ಬಡಾವಣೆಯ ಉದ್ಯಾನವನಕ್ಕೆ ಹೊಸದಾಗಿ ಕೊರೆದಿರುವ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗೆ E-Procurement ಮುಖಾಂತರ ಟೆಂಡರ್ ಅಧಿಸೂಚನೆಯನ್ನು ಈ ಹಿಂದೆ ದಿನಾಂಕ 07-09-2012 ರಂದು ಹೊರಡಿಸಿದ್ದು, ಟೆಂಡರ್‌ಗಳನ್ನು ದಿನಾಂಕ 22-09-2012 ರಂದು ತೆರೆಯಲಾಗಿರುತ್ತದೆ. ಟೆಂಡರ್‌ಗಳಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರ ಟೆಂಡರ್ Evaluation ಕೈಗೊಂಡು ನಿಗಧಿ ಪಡಿಸಿದ ಮಾನದಂಡಗಳಿಗೆ ಅನುಸಾರವಾಗಿ ತಾಂತ್ರಿಕ ಅರ್ಹತೆಯನ್ನು ಪರಿಶೀಲಿಸಿದೆ. ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಟೆಂಡರ್ ದರಗಳ ಆಧಾರದ ಮೇಲೆ ತುಲನಾತ್ಮಕ ಪಟ್ಟಿಯನ್ನು ತಯಾರಿಸಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ.

**ಕ್ರಮ ಸಂಖ್ಯೆ- 1 ಕೆಲಸದ ಹೆಸರು :** ತುಮಕೂರು ನಗರದ ಗೋಕುಲ ಬಡಾವಣೆಯ ಉದ್ಯಾನವನಕ್ಕೆ ಹೊಸದಾಗಿ ಕೊರೆದಿರುವ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿ.

| ಕ್ರ ಸಂ. | ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ವ್ಯತ್ಯಾಸದ ಮೊತ್ತ ರೂ. | ಶೇಕಡವಾರು ಹೆಚ್ಚು/ ಕಡಿಮೆ |
|---|---|---|---|---|---|
| 1. | ಶ್ರೀ ಸುರೇಶ್ (ಶ್ರೀ ಸಿದ್ದೇಶ್ವರ ಎಲೆಕ್ಟ್ರಿಕಲ್ಸ್ ತುಮಕೂರು) | 1,54,425.93 | 1,53,859.93 | 566.00 | 0.37 (ಕಡಿಮೆ) |
| 2. | ಶ್ರೀ ಮಂಜಣ್ಣ (1ನೇ ದರ್ಜೆ ಗುತ್ತಿಗೆದಾರರು ತುಮಕೂರು) | 1,54,425.93 | 1,62,082.50 | 7,656.57 | 4.96 (ಹೆಚ್ಚು) |

ಮೇಲ್ಕಂಡ ಕಾಮಗಾರಿಗೆ ಇಬ್ಬರು ಗುತ್ತಿಗೆದಾರರು ಟೆಂಡರ್ ಸಲ್ಲಿಸಿರುತ್ತಾರೆ. ಈ ಇಬ್ಬರು ಗುತ್ತಿಗೆದಾರರ ದರಗಳನ್ನು ತುಲನಾತ್ಮಕ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ಅತೀ ಕಡಿಮೆ ದರ ನಮೂದಿಸಿರುವ ಶ್ರೀ ಸುರೇಶ್, ಶ್ರೀ ಸಿದ್ದೇಶ್ವರ ಎಲೆಕ್ಟ್ರಿಕಲ್ಸ್, ತುಮಕೂರು. ಇವರು ರೂ.1,53,859.93 ಗಳ ಮೊತ್ತವನ್ನು ನಮೂದಿಸಿದ್ದು, ಈ ದರವು ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 0.37 ರಷ್ಟು ಕಡಿಮೆ ಇರುತ್ತದೆ. ಆದುದರಿಂದ ಸದರಿಯವರ ಟೆಂಡರ್‌ನ್ನು ಅನುಮೋದಿಸಿ ಕಾರ್ಯಾದೇಶ ನೀಡಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ಕ್ರಮ ಸಂಖ್ಯೆ– 2 ಕೆಲಸದ ಹೆಸರು :** ತುಮಕೂರು ನಗರದ ಸಿದ್ದರಾಮೇಶ್ವರ ಬಡಾವಣೆಯ ಉದ್ಯಾನವನಕ್ಕೆ ಹೊಸದಾಗಿ ಕೊರೆದಿರುವ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿ

| ಕ್ರ ಸಂ. | ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ವ್ಯತ್ಯಾಸದ ಮೊತ್ತ ರೂ. | ಶೇಕಡವಾರು ಹೆಚ್ಚು/ ಕಡಿಮೆ |
|---|---|---|---|---|---|
| 1. | ಶ್ರೀ ಎಂ.ಕಾಂತರಾಜು (ಶ್ರೀ ಕಲ್ಪನಾ ಎಲೆಕ್ಟ್ರಿಕಲ್ಸ್ ತುಮಕೂರು) | 1,20,748.91 | 1,15,669.20 | 5079.71 | 4.21 (ಕಡಿಮೆ) |
| 2. | ಶ್ರೀ ಸುರೇಶ್ (ಶ್ರೀ ಸಿದ್ದೇಶ್ವರ ಎಲೆಕ್ಟ್ರಿಕಲ್ಸ್ ತುಮಕೂರು) | 1,20,748.91 | 1,20,718.71 | 30.20 | 0.03 (ಕಡಿಮೆ) |

ಮೇಲ್ಕಂಡ ಕಾಮಗಾರಿಗೆ ಇಬ್ಬರು ಗುತ್ತಿಗೆದಾರರು ಟೆಂಡರ್ ಸಲ್ಲಿಸಿರುತ್ತಾರೆ. ಈ ಇಬ್ಬರು ಗುತ್ತಿಗೆದಾರರ ದರಗಳನ್ನು ತುಲನಾತ್ಮಕ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ಅತೀ ಕಡಿಮೆ ದರ ನಮೂದಿಸಿರುವ ಶ್ರೀ ಎಂ.ಕಾಂತರಾಜು, ಶ್ರೀ ಕಲ್ಪನಾ ಎಲೆಕ್ಟ್ರಿಕಲ್ಸ್, ತುಮಕೂರು. ಇವರು ರೂ. 1,15,669.20 ಗಳ ಮೊತ್ತವನ್ನು ನಮೂದಿಸಿದ್ದು, ಈ ದರವು ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 4.21 ರಷ್ಟು ಕಡಿಮೆ ಇರುತ್ತದೆ. ಆದುದರಿಂದ ಸದರಿಯವರ ಟೆಂಡರ್‌ನ್ನು ಅನುಮೋದಿಸಿ ಕಾರ್ಯಾದೇಶ ನೀಡಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಕ್ರಮ ಸಂಖ್ಯೆ (1) ರ ಕಾಮಗಾರಿಗೆ ಶ್ರೀ ಸುರೇಶ್, ಶ್ರೀ ಸಿದ್ದೇಶ್ವರ ಎಲೆಕ್ಟ್ರಿಕಲ್ಸ್, ತುಮಕೂರು, ಕ್ರಮ ಸಂಖ್ಯೆ (2) ರ ಕಾಮಗಾರಿಗೆ ಎಂ.ಕಾಂತರಾಜು, ಶ್ರೀ ಕಲ್ಪನಾ ಎಲೆಕ್ಟ್ರಿಕಲ್ಸ್, ತುಮಕೂರು ಇವರುಗಳಿಗೆ ಅತಿ ಕಡಿಮೆ ಗುತ್ತಿಗೆ ಮೊತ್ತ ಕ್ರಮವಾಗಿ ರೂ. ರೂ.1,53,859.93 ಮತ್ತು ರೂ.1,15,669.20 ಗಳಿಗೆ ಕಾರ್ಯಾದೇಶ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು..

**ವಿಷಯ ಸಂಖ್ಯೆ 18** ಪ್ರಾಧಿಕಾರದ ಸ್ಥಳಿಯ ಟೆಂಡರ್ ಪ್ರಕಟಣೆ ಸಂಖ್ಯೆ ಟಿಯುಡಿಎ/ಟೆಂಡರ್/ಸಕಾಇ/ 13/2012-13 ದಿನಾಂಕ 31-08-2012 ರಂದು ಕರೆದಿರುವ ಕಾಮಗಾರಿಗಳ ಟೆಂಡರ್ ಅನುಮೋದಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರದ ರಿಂಗ್ ರಸ್ತೆಯಲ್ಲಿರುವ ಶೆಟ್ಟಿಹಳ್ಳಿ ಸರ್ಕಲ್ ಬಳಿ ಬಸ್ ಪ್ರಯಾಣಿಕರ ತಂಗುದಾಣ ನಿರ್ಮಿಸುವ ಕಾಮಗಾರಿಗೆ E-Procurement ಮುಖಾಂತರ ಟೆಂಡರ್ ಅಧಿಸೂಚನೆಯನ್ನು ಈ ಹಿಂದೆ ದಿನಾಂಕ 31-08-2012 ರಂದು ಹೊರಡಿಸಿದ್ದು, ಟೆಂಡರ್‌ಗಳನ್ನು ದಿನಾಂಕ 18-09-2012 ರಂದು ತೆರೆಯಲಾಗಿರುತ್ತದೆ. ಟೆಂಡರ್‌ಗಳಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರ ಟೆಂಡರ್ Evaluation ಕೈಗೊಂಡು ನಿಗಧಿ ಪಡಿಸಿದ ಮಾನದಂಡಗಳಿಗೆ ಅನುಸಾರವಾಗಿ ತಾಂತ್ರಿಕ ಅರ್ಹತೆಯನ್ನು ಪರಿಶೀಲಿಸಿದೆ. ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಟೆಂಡರ್ ದರಗಳ ಆಧಾರದ ಮೇಲೆ ತುಲನಾತ್ಮಕ ಪಟ್ಟಿಯನ್ನು ತಯಾರಿಸಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ.

**ಕ್ರಮ ಸಂಖ್ಯೆ -1 ಕೆಲಸದ ಹೆಸರು :** ತುಮಕೂರು ನಗರದ ರಿಂಗ್ ರಸ್ತೆಯಲ್ಲಿರುವ ಶೆಟ್ಟಿಹಳ್ಳಿ ಸರ್ಕಲ್ ಬಳಿ ಬಸ್ ಪ್ರಯಾಣಿಕರ ತಂಗುದಾಣ ನಿರ್ಮಿಸುವುದು.

| ಕ್ರ ಸಂ. | ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ ರೂ. | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | ವ್ಯತ್ಯಾಸದ ಮೊತ್ತ ರೂ. | ಶೇಕಡವಾರು ಹೆಚ್ಚು/ ಕಡಿಮೆ |
|---|---|---|---|---|---|
| 1. | ಶ್ರೀ ಡಿ.ಆರ್.ಮುರುಳಿ (3ನೇ ದರ್ಜೆ ಗುತ್ತಿಗೆದಾರರು ತುಮಕೂರು) | 3,35,751.86 | 3,29,844.16 | 5907.70 | 1.76 (ಕಡಿಮೆ) |
| 2. | ಶ್ರೀ ಸುರೇಶ್ (3ನೇ ದರ್ಜೆ ಗುತ್ತಿಗೆದಾರರು ತುಮಕೂರು) | 3,35,751.86 | 3,35,738.58 | 13.28 | 0.00 (ಹೆಚ್ಚು) |

ಮೇಲ್ಕಂಡ ಕಾಮಗಾರಿಗೆ ಇಬ್ಬರು ಗುತ್ತಿಗೆದಾರರು ಟೆಂಡರ್ ಸಲ್ಲಿಸಿರುತ್ತಾರೆ. ಈ ಇಬ್ಬರು ಅರ್ಹ ಗುತ್ತಿಗೆದಾರರ ದರಗಳನ್ನು ತುಲನಾತ್ಮಕ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ಅತೀ ಕಡಿಮೆ ದರ ನಮೂದಿಸಿರುವ ಶ್ರೀ ಡಿ.ಆರ್.ಮುರುಳಿ, 3ನೇ ದರ್ಜೆ ಗುತ್ತಿಗೆದಾರರು, ತುಮಕೂರು ಇವರು ರೂ.3,29,844.16 ಗಳ ಮೊತ್ತವನ್ನು ನಮೂದಿಸಿದ್ದು, ಈ ದರವು ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 1.76 ರಷ್ಟು ಕಡಿಮೆ ಇರುತ್ತದೆ. ಆದುದರಿಂದ ಸದರಿಯವರ ಟೆಂಡರ್‌ನ್ನು ಅನುಮೋದಿಸಿ ಕಾರ್ಯಾದೇಶ ನೀಡಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಸದರಿ ಕಾಮಗಾರಿಗೆ ಶ್ರೀ ಡಿ.ಆರ್.ಮುರುಳಿ, 3ನೇ ದರ್ಜೆ ಗುತ್ತಿಗೆದಾರರು, ತುಮಕೂರು ಇವರು ನಮೂದಿಸಿರುವ ದರವು ಅಂದಾಜು ಮೊತ್ತಕ್ಕಿಂತ ಶೇಕಡ 1.76 ರಷ್ಟು ಕಡಿಮೆ ಇರುವುದರಿಂದ ರೂ.3,29,844.16 ಗಳಿಗೆ ಕಾರ್ಯಾದೇಶ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 19** ಮೇಲೇಕೋಟೆ – ವೀರಸಾಗರ ವಸತಿ ಬಡಾವಣೆಯ ನಿವೇಶನ ಸಂಖ್ಯೆ 1002 ಕ್ಕೆ ಸಂಬಂಧಿಸಿದಂತೆ ದಸ್ತಾವೇಜು ಮಾಡಿಕೊಡುವ ಬಗ್ಗೆ

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರದಿಂದ ಮೇಲೇಕೋಟೆ–ವೀರಸಾಗರ ವಸತಿ ಬಡಾವಣೆಯ ನಿವೇಶನಗಳ ಹಂಚಿಕೆ ಸಂಬಂಧ ದಿನಾಂಕ 12–01–2004 ರಂದು ಪ್ರಕಟಣೆ ನೀಡಲಾಗಿತ್ತು. ಶ್ರೀ ಟಿ.ಬಿ.ಗುರುಮೂರ್ತಿ ಎಂಬುವವರು ಅರ್ಜಿ ಸಂಖ್ಯೆ 3430 ರಲ್ಲಿ ರೂ.10,800 ಗಳ ಪ್ರಾರಂಭಿಕ ಠೇವಣಿಯನ್ನು ಸಲ್ಲಿಸಿ, ಸಲ್ಲಿಸಿಕೊಂಡಿದ್ದ ಅರ್ಜಿಯು ಪುರಸ್ಕೃತಗೊಂಡ ಮೇರೆಗೆ ದಿನಾಂಕ 27–07–2004 ರಲ್ಲಿ ಕ್ರಮಾಂಕ ಟಿಯುಡಿಎ/ನಿವಿಹಂ/02/2003–04 ರಂತೆ ನಿವೇಶನ ಹಂಚಿಕೆ ತಿಳುವಳಿಕೆ ಪತ್ರವನ್ನು ಆರ್.ಪಿ.ಎ.ಡಿ.ಮೂಲಕ ರವಾನಿಸಲಾಗಿತ್ತು. ಉಳಿಕೆ ಮೊಬಲಗನ್ನು ದಿನಾಂಕ 29–07–2004 ರಂದು ಪ್ರಾಧಿಕಾರದ ಖಾತೆಗೆ ಜಮೆ ಮಾಡಿರುತ್ತಾರೆ. ದಿನಾಂಕ 31–08–2012 ರಂದು ಅರ್ಜಿದಾರರು ಮನವಿ ಸಲ್ಲಿಸಿ, ಸದರಿ ನಿವೇಶನಕ್ಕೆ ಸಂಬಂಧಿಸಿದಂತೆ ದಸ್ತಾವೇಜು ಮಾಡಿಕೊಡಬೇಕೆಂದು ಕೋರಿರುತ್ತಾರೆ. ಅಸಾದಾರಣ ವಿಳಂಬವಾಗಿದ್ದು, ನಿಯುಮಗಳಲ್ಲಿ ಅವಕಾಶವಿರುವುದಿಲ್ಲ. ಅರ್ಜಿದಾರರು ನಿಗಧಿತ ಸಮಯಕ್ಕೆ ಹಣ ಪಾವತಿಸಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಿಂದ ಮೇಲೇಕೋಟೆ–ವೀರಸಾಗರ ವಸತಿ ಬಡಾವಣೆಯ ನಿವೇಶನಗಳ ಹಂಚಿಕೆ ಸಂಬಂಧ ದಿನಾಂಕ 12–01–2004 ರಂದು ಪ್ರಕಟಣೆ ನೀಡಲಾಗಿತ್ತು. ಶ್ರೀ ಟಿ.ಬಿ.ಗುರುಮೂರ್ತಿ ಎಂಬುವವರು ಅರ್ಜಿ ಸಂಖ್ಯೆ 3430 ರಲ್ಲಿ ರೂ.10,800 ಗಳ ಪ್ರಾರಂಭಿಕ ಠೇವಣಿಯನ್ನು ಸಲ್ಲಿಸಿ, ಸಲ್ಲಿಸಿಕೊಂಡಿದ್ದ ಅರ್ಜಿಯು ಪುರಸ್ಕೃತಗೊಂಡ ಮೇರೆಗೆ ದಿನಾಂಕ 27–07–2004 ರಲ್ಲಿ ಕ್ರಮಾಂಕ ಟಿಯುಡಿಎ/ನಿವಿಹಂ/02/2003–04 ರಂತೆ ನಿವೇಶನ ಹಂಚಿಕೆ ತಿಳುವಳಿಕೆ ಪತ್ರವನ್ನು ಆರ್.ಪಿ.ಎ.ಡಿ.ಮೂಲಕ ರವಾನಿಸಲಾಗಿತ್ತು. ಉಳಿಕೆ ಮೊಬಲಗನ್ನು ದಿನಾಂಕ 29–07–2004 ರಂದು ಪ್ರಾಧಿಕಾರದ ಖಾತೆಗೆ ಜಮೆ ಮಾಡಿರುತ್ತಾರೆ. ದಿನಾಂಕ 31–08–2012 ರಂದು ಅರ್ಜಿದಾರರು ಮನವಿ ಸಲ್ಲಿಸಿ, ಸದರಿ ನಿವೇಶನಕ್ಕೆ ಸಂಬಂಧಿಸಿದಂತೆ ದಸ್ತಾವೇಜು ಮಾಡಿಕೊಡಬೇಕೆಂದು ಕೋರಿದ್ದು, ನಿಯಮಾನುಸಾರ ಈಗಾಗಲೇ ನಿಗಧಿತ ಸಮಯ ಮುಕ್ತಾಯವಾಗಿರುವುದರಿಂದ ದಸ್ತಾವೇಜು ನೊಂದಣಿ ಮಾಡಿಕೊಡಲು ನಿಯಮಗಳಲ್ಲಿ ಅವಕಾಶವಿಲ್ಲವೆಂಬ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು. ಆದರೆ ಹಂಚಿಕೆದಾರರು ನಿಗಧಿತ ಕಾಲಮಿತಿಯೊಳಗೆ ನಿವೇಶನದ ಪೂರ್ಣ ಮೊತ್ತವನ್ನು ಪಾವತಿಸಿದ್ದು, ಅನಿವಾರ್ಯ ಕಾರಣಗಳಿಂದ ದಸ್ತಾವೇಜು ನೊಂದಣಿ ಮಾಡಿಸಿಕೊಳ್ಳುವುದರಲ್ಲಿ ಮಾತ್ರ ವಿಳಂಬವಾಗಿರುತ್ತದೆ ಮತ್ತು ಯಾವುದೇ ಮೊತ್ತ ಬಾಕಿ ಇಲ್ಲದ ಕಾರಣ ನಿವೇಶನದ ಹಂಚಿಕೆದಾರರ ಕೋರಿಕೆಯಂತೆ ದಸ್ತಾವೇಜನ್ನು ನೊಂದಣಿ ಮಾಡಿಕೊಡಲು ಸಭೆಯು ಬಹುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 20** ತುಮಕೂರು ನಗರದ ಮರಳೂರು ಗ್ರಾಮದ ಸರ್ವೆ ನಂಬರ್ 28/2 ರಲ್ಲಿ 1 ಎಕರೆ 07 ಗುಂಟೆ ವಿಸ್ತೀರ್ಣದ ಪ್ರದೇಶದ ವಸತಿ ವಿನ್ಯಾಸದಲ್ಲಿ ಬಾಕಿ ಇರುವ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ತುಮಕೂರು ನಗರದ ಮರಳೂರು ಗ್ರಾಮದ ಸರ್ವೆ ನಂಬರ್ 28/2 ರಲ್ಲಿ ವಿಸ್ತೀರ್ಣ 1 ಎಕರೆ 07 ಗುಂಟೆ ವಿಸ್ತೀರ್ಣದ ವಸತಿ ವಿನ್ಯಾಸಕ್ಕೆ ದಿನಾಂಕ 18-08-2012 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 21 ರ ನಿರ್ಣಯದನ್ವಯ ಸದರಿ ಜಮೀನಿಗೆ ವಿನ್ಯಾಸ ಅನುಮೋದನೆ ನೀಡಿ ಈ ಕಛೇರಿಯ ಪ್ರಾಥಮಿಕ ವಿನ್ಯಾಸ ಅನುಮೋದನೆ ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/52/2011-12 ದಿನಾಂಕ 22-08-2012 ರನ್ವಯ ಶೇಕಡ 60 ರಷ್ಟು ನಿವೇಶನಗಳನ್ನು ಅರ್ಜಿದಾರರಾದ ಶ್ರೀ ಸುಜಯ್ ಪಾಯ್ಸ್ ಮತ್ತು ಶ್ರೀ ಶೈನಿ ಪಾಯ್ಸ್ ಇವರ ಹೆಸರುಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಅರ್ಜಿದಾರರು ಸದರಿ ವಸತಿ ವಿನ್ಯಾಸದಲ್ಲಿ ನಿರ್ವಹಿಸಬೇಕಾದ ಅಗತ್ಯ ಕಾಮಗಾರಿಗಳನ್ನು ನಿರ್ವಹಿಸಲು ಈ ಕಛೇರಿಯ ಕಾರ್ಯಾದೇಶ ಸಂಖ್ಯೆ ತುನಪ್ರಾ/ಸಕಾಇ/ಎಲ್ಎಓ/52/2011-12 ದಿನಾಂಕ 22-06-2012 ರಂದು ಕಾರ್ಯಾದೇಶ ನೀಡಲಾಗಿತ್ತು. ವಸತಿ ವಿನ್ಯಾಸದಲ್ಲಿ ಡಾಂಬರೀಕರಿಸಿದ ರಸ್ತೆ, ಕಾಂಕ್ರೀಟ್ ಚರಂಡಿ, ಸಿ.ಸಿಡ್ರೈನ್, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ಉದ್ಯಾವನಕ್ಕೆ ಚೈನ್‌ಲಿಂಕ್ ಪೆನ್ಸಿಂಗ್ ಕಾಮಗಾರಿ, ವಿದ್ಯುತ್ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಿದ್ದು, ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದೆಂದು ಈ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು ವರದಿ ನೀಡಿರುತ್ತಾರೆ. ಅದರಂತೆ ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದೆಂದು ತಿಳಿಸಿರುತ್ತಾರೆ. ಅರ್ಜಿದಾರರು ದಿನಾಂಕ 12-09-2012 ರಂದು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ವಸತಿ ವಿನ್ಯಾಸದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಾಗಿ ತಿಳಿಸಿ ಬಾಕಿ ಉಳಿದಿರುವ ಶೇಕಡ 40 ರಷ್ಟು ನಿವೇಶನಗಳು ಬಿಡುಗಡೆಗೊಳಿಸಿ ಅಂತಿಮ ವಿನ್ಯಾಸ ಅನುಮೋದನೆ ನೀಡಬೇಕೆಂದು ಕೋರಿರುತ್ತಾರೆ.

ತುಮಕೂರು ನಗರದ ಮರಳೂರು ಗ್ರಾಮದ ಸರ್ವೆ ನಂಬರ್ 28/2 ರಲ್ಲಿ ವಿಸ್ತೀರ್ಣ 1 ಎಕರೆ 07 ಗುಂಟೆ ವಿಸ್ತೀರ್ಣದ ವಸತಿ ವಿನ್ಯಾಸ ಅನುಮೋದನೆ ಸಂಬಂಧ ದಿನಾಂಕ 06-09-2012 ರಂದು ಶ್ರೀ ಎನ್.ಪಿ.ರಂಗನಾಥ್ ಬಿನ್ ಪುಟ್ಟರಂಗಯ್ಯ, ಮಾರುತಿ ನಗರ, ತುಮಕೂರು ರವರು ಅರ್ಜಿ ಸಲ್ಲಿಸಿ, ಮೇಲ್ಕಂಡ ಜಮೀನು ಮೆ॥ ಮ್ಯಾನೇಜರ್ ಬ್ರಿಕ್ಸ್ ಇಂಡಸ್ಟ್ರೀಸ್ ರವರ ಹೆಸರಿಗೆ ಪಹಣಿ ಇದ್ದು, ಸದರಿ ಮ್ಯಾನೇಜರ್ ರವರು ಶ್ರೀಮತಿ ಫರ್ಜಾನಾ ಖಾನಂ ಕೋಂ ಹಿದಾಯತುಲ್ಲಾ ಖಾನ್ ಶಿರಾನಿ ಇವರಿಗೆ ಜಿ.ಪಿ.ಎ. ಆಗಿದ್ದು, ಈ ಜಮೀನಿನ ಮೇಲೆ ಜೆ.ಎಂ.ಎಫ್.ಸಿ.ನ್ಯಾಯಾಲಯ ತುಮಕೂರು ಇಲ್ಲಿ ಓ.ಎಸ್.ನಂ.741/ 2007 ರಲ್ಲಿ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣವು

ತೀರ್ಮಾನವಾಗುವವರೆವಿಗೂ ಪ್ರಸ್ತಾಪಿತ ಜಮೀನು ಪರಬಾರೆ ಮಾಡಬಾರದೆಂದು ತಡೆಯಾಜ್ಞೆ ನೀಡಿರುವುದಾಗಿ ತಿಳಿಸಿ, ಮೇಲ್ಕಂಡ ಜಮೀನಿಗೆ ಅಭಿವೃದ್ಧಿಪಡಿಸಲು ಅನುಮೋದನೆಯನ್ನು ನೀಡಬಾರದೆಂದು ವಿನಂತಿಸಿರುತ್ತಾರೆ. ಶ್ರೀ ಎಂ.ಪಿ.ರಂಗನಾಥ್ ರವರು ಸಲ್ಲಿಸಿರುವ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ ದಿನಾಂಕ 11-01-2008 ರಂದು ಮಾನ್ಯ ಮೂರನೇ ಅಧಿಕ ಸಿವಿಲ್ ಜಡ್ಜ್ (ಕೆ.ಬಿ.) ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ, ತುಮಕೂರು ರಲ್ಲಿ ಒ.ಎಸ್.ನಂ.741/2007 ರಲ್ಲಿ ಪ್ರಸ್ತಾಪಿತ ಭೂ ಪ್ರದೇಶವನ್ನು ಪರಬಾರೆ ಮಾಡದೆಂದು ನೀಡಲಾಗಿದ್ದ ತಾತ್ಕಾಲಿಕ ನಿರ್ಭಂದಿತಾಜ್ಞೆಯನ್ನು ಸ್ಥಿರೀಕರಿಸಲಾಗಿದೆ. ನಂತರ ದಿನಾಂಕ 09-08-2012 ರಂದು ಸ್ಟಾಂಡರ್ಡ್ ಬ್ರಿಕ್ ಅಂಡ್ ಟೈಲ್ಸ್ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ವಿ.ಎಸ್.ಷಣ್ಮುಗಂ ರವರು ಶ್ರೀ ಸುಯಜ್ ಪಾಯಸ್ ಮತ್ತು ಡಾ|| ಶೈನಿ ಪಾಯಸ್ ರವರಿಗೆ ಈ ಜಮೀನನ್ನು ಮಾರಾಟ ಮಾಡಿರುತ್ತಾರೆ. ಸದರಿ ಕ್ರಯಪತ್ರದಲ್ಲಿ ಒ.ಎಸ್.ನಂ.741/2007 ರ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ಸದರಿ ಪ್ರಕರಣದಲ್ಲಿ ನೀಡಲಾಗಿರುವ ನಿರ್ಭಂದಿತಾಜ್ಞೆ ಇರುವ ಬಗ್ಗೆ ಈ ಕಛೇರಿಗೆ ಸಕಾಲದ ಮಾಹಿತಿ ಲಭ್ಯವಿಲ್ಲದ ಕಾರಣ ದಿನಾಂಕ 22-08-2012 ರಂದು ಪ್ರಾಥಮಿಕ ವಿನ್ಯಾಸ ಅನುಮೋದನೆ ನೀಡಲಾಗಿದ್ದು, ಈ ಪ್ರತಿಬಂಧಕಾಜ್ಞೆಯನ್ನು ತೆರವಾಗದೇ ಅಂತಿಮ ವಿನ್ಯಾಸ ಅನುಮೋದನೆ ನೀಡಿದಲ್ಲಿ ನ್ಯಾಯಾಲಯದ ನಿಂದನೆ (Contempt of Court) ಆಗುವುದರಿಂದ ಅಂತಿಮ ವಿನ್ಯಾಸ ಅನುಮೋದನೆ ನೀಡುವುದು ಸೂಕ್ತವಾಗಿರುವುದಿಲ್ಲ. ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಪ್ರಸ್ತಾವಿತ ಪ್ರದೇಶದ ಸ್ಥಳ ಪರಿಶೀಲನೆ ಮಾಡಲಾಯಿತು. ತುಮಕೂರು ನಗರದ ಮರಳೂರು ಗ್ರಾಮದ ಸರ್ವೆ ನಂಬರ್ 28/2 ರಲ್ಲಿ ವಿಸ್ತೀರ್ಣ 1 ಎಕರೆ 07 ಗುಂಟೆ ವಿಸ್ತೀರ್ಣದ ವಸತಿ ವಿನ್ಯಾಸ ಅನುಮೋದನೆ ಸಂಬಂಧ ದಿನಾಂಕ 06-09-2012 ರಂದು ಶ್ರೀ ಎನ್.ಪಿ.ರಂಗನಾಥ್ ಬಿನ್ ಪುಟ್ಟರಂಗಯ್ಯ, ಮಾರುತಿ ನಗರ, ತುಮಕೂರು ರವರು ಅರ್ಜಿ ಸಲ್ಲಿಸಿ, ಮೇಲ್ಕಂಡ ಜಮೀನು ಮೆ|| ಮ್ಯಾನೇಜರ್ ಬ್ರಿಕ್ಸ್ ಇಂಡಸ್ಟ್ರೀಸ್ ರವರ ಹೆಸರಿಗೆ ಪಹಣಿ ಇದ್ದು, ಸದರಿ ಮ್ಯಾನೇಜರ್ ರವರು ಶ್ರೀಮತಿ ಫರ್ಜಾನಾ ಖಾನಂ ಕೋಂ ಹಿದಾಯತುಲ್ಲಾ ಖಾನ್ ಶಿರಾನಿ ಇವರಿಗೆ ಜಿ.ಪಿ.ಎ. ಆಗಿದ್ದು, ಈ ಜಮೀನಿನ ಮೇಲೆ ಜೆ.ಎಂ.ಎಫ್.ಸಿ.ನ್ಯಾಯಾಲಯ ತುಮಕೂರು ಇಲ್ಲಿ ಒ.ಎಸ್.ನಂ.741/2007 ರಲ್ಲಿ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣವು ತೀರ್ಮಾನವಾಗುವವರೆವಿಗೂ ಪ್ರಸ್ತಾಪಿತ ಜಮೀನು ಪರಬಾರೆ ಮಾಡಬಾರದೆಂದು ತಡೆಯಾಜ್ಞೆ ನೀಡಿರುವುದಾಗಿ ತಿಳಿಸಿ, ಮೇಲ್ಕಂಡ ಜಮೀನಿಗೆ ಅಭಿವೃದ್ಧಿಪಡಿಸಲು ಅನುಮೋದನೆಯನ್ನು ನೀಡಬಾರದೆಂದು ವಿನಂತಿಸಿರುತ್ತಾರೆ. ದಿನಾಂಕ 11-01-2008 ರಂದು ಮಾನ್ಯ ಮೂರನೇ ಅಧಿಕ ಸಿವಿಲ್ ಜಡ್ಜ್ (ಕೆ.ಬಿ.) ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ, ತುಮಕೂರು ರಲ್ಲಿ ಒ.ಎಸ್.ನಂ.741/

2007 ರಲ್ಲಿ ಪ್ರಸ್ತಾಪಿತ ಭೂ ಪ್ರದೇಶವನ್ನು ಪರಬಾರೆ ಮಾಡದೆಂದು ನೀಡಲಾಗಿದ್ದ ತಾತ್ಕಾಲಿಕ ನಿರ್ಭಂದಿತಾಜ್ಞೆಯನ್ನು ಸ್ಥಿರೀಕರಿಸಲಾಗಿದೆ. ನಂತರ ದಿನಾಂಕ 09-08-2012 ರಂದು ಸ್ಟಾಂಡರ್ಡ್ ಬ್ರಿಕ್ ಅಂಡ್ ಟೈಲ್ಸ್ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ವಿ.ಎಸ್.ಷಣ್ಮುಗಂ ರವರು ಶ್ರೀ ಸುಯಜ್ ಪಾಯಸ್ ಮತ್ತು ಡಾ॥ ಶೈನಿ ಪಾಯಸ್ ರವರಿಗೆ ಈ ಜಮೀನನ್ನು ಮಾರಾಟ ಮಾಡಿರುತ್ತಾರೆ. ಸದರಿ ಪ್ರಕರಣದಲ್ಲಿ ನೀಡಲಾಗಿರುವ ನಿರ್ಭಂದಿತಾಜ್ಞೆ ಇರುವ ಬಗ್ಗೆ ಈ ಕಛೇರಿಗೆ ಸಕಾಲದ ಮಾಹಿತಿ ಲಭ್ಯವಿಲ್ಲದ ಕಾರಣ ದಿನಾಂಕ 22-08-2012 ರಂದು ಪ್ರಾಥಮಿಕ ವಿನ್ಯಾಸ ಅನುಮೋದನೆ ನೀಡಲಾಗಿದ್ದು, ಈ ಪ್ರತಿಬಂಧಕಾಜ್ಞೆಯನ್ನು ತೆರವಾಗದೇ ಅಂತಿಮ ವಿನ್ಯಾಸ ಅನುಮೋದನೆ ನೀಡಿದಲ್ಲಿ ನ್ಯಾಯಾಲಯದ ನಿಂದನೆ (Contempt of Court) ಆಗುವುದರಿಂದ ಅಂತಿಮ ವಿನ್ಯಾಸ ಅನುಮೋದನೆ ನೀಡುವುದು ಸೂಕ್ತವಾಗಿರುವುದಿಲ್ಲ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ತುಮಕೂರು ನಗರದ ಮರಳೂರು ಗ್ರಾಮದ ಸರ್ವೆ ನಂಬರ್ 28/2 ರಲ್ಲಿ ವಿಸ್ತೀರ್ಣ 1 ಎಕರೆ 07 ಗುಂಟೆ ಪ್ರದೇಶಕ್ಕೆ ಈ ಕಛೇರಿಯ ಪ್ರಾಥಮಿಕ ವಿನ್ಯಾಸ ಅನುಮೋದನೆ ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/52/2011-12 ದಿನಾಂಕ 22-08-2012 ರನ್ವಯ ಶೇಕಡ 60 ರಷ್ಟು ನಿವೇಶನಗಳನ್ನು ಅರ್ಜಿದಾರರಾದ ಶ್ರೀ ಸುಜಯ್ ಪಾಯ್ಸ್ ಮತ್ತು ಶ್ರೀ ಶೈನಿ ಪಾಯ್ಸ್ ಇವರ ಹೆಸರುಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ವಿನ್ಯಾಸದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದರಿಂದ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವಂತೆ ದಿನಾಂಕ 12-09-2012 ರಂದು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಶ್ರೀಮತಿ ಫರ್ಜಾನಾ ಖಾನಂ ಕೋಂ ಹಿದಾಯತುಲ್ಲಾ ಖಾನ್ ಶಿರಾನಿ ಇವರಿಗೆ ಜಿ.ಪಿ.ಎ. ಆಗಿದ್ದು, ಈ ಜಮೀನಿನ ಮೇಲೆ ಜೆ.ಎಂ.ಎಫ್.ಸಿ.ನ್ಯಾಯಾಲಯ ತುಮಕೂರು ಇಲ್ಲಿ ಒ.ಎಸ್.ನಂ.741/2007 ರಲ್ಲಿ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣವು ತೀರ್ಮಾನವಾಗುವವರೆವಿಗೂ ಪ್ರಸ್ತಾಪಿತ ಜಮೀನು ಪರಬಾರೆ ಮಾಡಬಾರದೆಂದು ತಡೆಯಾಜ್ಞೆ ಇರುವುದನ್ನು ಆಯುಕ್ತರು ಸಭೆಯ ಗಮನಕ್ಕೆ ತಂದರು. ಒಂದು ವೇಳೆ ಈ ತಡೆಯಾಜ್ಞೆಗೆ ಇರುವ ಅಂಶವನ್ನು ಸಭೆಯು ಪರಿಗಣಿಸಿತು. ಈ ಪ್ರಕರಣವು ತುಂಬಾ ಹಿಂದಿನ ಪ್ರಕರಣವಾಗಿರುವುದರಿಂದ ಇಷ್ಟೊಂದು ದೀರ್ಘಕಾಲ ತಡೆಯಾಜ್ಞೆ ಇರುವುದು ಸಾಧ್ಯವಿಲ್ಲವೆಂದು ಅಧ್ಯಕ್ಷರು ಅಭಿಪ್ರಾಯ ಪಟ್ಟು, ಈ ಬಗ್ಗೆ ಅರ್ಜಿದಾರರಿಂದ ಹೆಚ್ಚಿನ ಮಾಹಿತಿ ಪಡೆದು ಪರಿಶೀಲಿಸಿ ಕ್ರಮಕೈಗೊಳ್ಳಬಹುದೆಂದು ತಿಳಿಸಿದರು. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಅರ್ಜಿದಾರರಿಂದ ನ್ಯಾಯಾಲಯದಲ್ಲಿರುವ ಪ್ರಕರಣದ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು, ತಡೆಯಾಜ್ಞೆ ರದ್ದುಗೊಂಡಿದಲ್ಲಿ ಅಥವಾ ಅರ್ಜಿದಾರರು ತಡೆಯಾಜ್ಞೆಯನ್ನು ರದ್ದುಪಡಿಸಿಕೊಂಡು ಬಂದಲ್ಲಿ ಪ್ರಾಧಿಕಾರದ ಕಾನೂನು

ಸಲಹೆಗಾರರ ಅಭಿಪ್ರಾಯದಂತೆ ಅಂತಿಮ ವಿನ್ಯಾಸ ಬಿಡುಗಡೆಗೆ ಕ್ರಮಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು..

**ವಿಷಯ ಸಂಖ್ಯೆ 21** ತುಮಕೂರು ನಗರದ ಬಡ್ಡಿಹಳ್ಳಿ ಗ್ರಾಮದ ಸರ್ವೆ ನಂಬರ್ 42/11 ರಲ್ಲಿ 0-39.04 ಗುಂಟೆ ವಿಸ್ತೀರ್ಣದ ಪ್ರದೇಶದ ವಸತಿ ವಿನ್ಯಾಸದಲ್ಲಿ ಬಾಕಿ ಇರುವ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ತುಮಕೂರು ನಗರದ ಬಡ್ಡಿಹಳ್ಳಿ ಗ್ರಾಮದ ಸರ್ವೆ ನಂಬರ್ 42/11 ರಲ್ಲಿ ಒಟ್ಟು 0-39.04 ಗುಂಟೆ ವಿಸ್ತೀರ್ಣದ ವಸತಿ ವಿನ್ಯಾಸಕ್ಕೆ ದಿನಾಂಕ 02-05-2012 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 05 ರ ನಿರ್ಣಯದನ್ವಯ ವಿನ್ಯಾಸವನ್ನು ಅನುಮೋದನೆ ನೀಡಿ, ವಿನ್ಯಾಸ ಅನುಮೋದನೆಗೆ ದಿನಾಂಕ 05-05-2012 ರಂದು ಶೇಕಡ 60 ರಷ್ಟು ನಿವೇಶನಗಳನ್ನು ಅರ್ಜಿದಾರರಾದ ಶ್ರೀಮತಿ ವಿಶಾಲಕ್ಷಮ್ಮ ಇವರ ಹೆಸರಿಗೆ ಬಿಡುಗಡೆ ಮಾಡಲಾಗಿತ್ತು. ಸದರಿ ವಸತಿ ವಿನ್ಯಾಸದಲ್ಲಿ ನಿರ್ವಹಿಸಬೇಕಾದ ಅಗತ್ಯ ಕಾಮಗಾರಿಗಳನ್ನು ನಿರ್ವಹಿಸುವಂತೆ ದಿನಾಂಕ 21-09-2012 ರಂದು ಈ ಕಾರ್ಯಾದೇಶ ಸಂಖ್ಯೆ ಟಿಯುಡಿಎ/ಸಕಾಇ/ಎಲ್ಎಒ/ 307/2011-12 ರಂತೆ ನೀಡಲಾಗಿತ್ತು. ವಸತಿ ವಿನ್ಯಾಸದಲ್ಲಿ ಡಾಂಬರೀಕರಿಸಿದ ರಸ್ತೆ, ಕಾಂಕ್ರೀಟ್ ಚರಂಡಿ, ನೀರು ಸರಬರಾಜು ಒಳಚರಂಡಿ ವ್ಯವಸ್ಥೆ, ಉದ್ಯಾನವನ ಮತ್ತು ವಿದ್ಯುಚ್ಛಕ್ತಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬೇಕೆಂದು ಈ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರವರು ವರದಿ ನೀಡಿರುತ್ತಾರೆ.

ತುಮಕೂರು ನಗರದ ಬಡ್ಡಿಹಳ್ಳಿ ಗ್ರಾಮದ ಸರ್ವೆ ನಂಬರ್ 42/11 ರಲ್ಲಿ 0-39.04 ಗುಂಟೆ ವಿಸ್ತೀರ್ಣದ ವಸತಿ ವಿನ್ಯಾಸ ಅನುಮೋದನೆಯನ್ನು ದಿನಾಂಕ 05-05-2012 ರಂದು ನೀಡಲಾಗಿತ್ತು. ನಂತರ ದಿನಾಂಕ 05-05-2012 ರಂದು ಶ್ರೀ ವೆಂಕಟರಮಣ ಎಂಬುವವರು ವಕೀಲರಿಂದ ಪತ್ರವನ್ನು ನೀಡಿ, ವಸತಿ ವಿನ್ಯಾಸವನ್ನು ಅನುಮೋದನೆಗೊಳಿಸಬಾರದೆಂದು ತಿಳಿಸಿ, ಈ ಸಂಬಂಧ ಮಾನ್ಯ 1ನೇ ಅಧಿಕ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ತುಮಕೂರು ನ್ಯಾಯಾಲಯದಲ್ಲಿ ಒ.ಎಸ್.ನಂ.19/2012 ರಲ್ಲಿ ಪ್ರಕರಣ ದಾಖಲಾಗಿರುವುದರಿಂದ ವಿನ್ಯಾಸ ಅನುಮೋದನೆ ನೀಡಬಾರದೆಂದು ಕೋರಿರುತ್ತಾರೆ. ಅರ್ಜಿದಾರರಾದ ಶ್ರೀ ವಿಶಾಲಾಕ್ಷಮ್ಮ ರವರು ಈ ಬಗ್ಗೆ ಮಾಹಿತಿ ನೀಡಿ ಪ್ರಕರಣವು ದಾಖಲಾಗಿದ್ದು, ನಂತರ ನ್ಯಾಯಾಲಯದ ಬಗ್ಗೆ ಇತ್ಯರ್ಥಗೊಳಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ. ಅರ್ಜಿದಾರರು ದಿನಾಂಕ 27-09-2012 ರಂದು ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿ, ವಸತಿ ವಿನ್ಯಾಸದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದರಿಂದ ಉಳಿದ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಲು ಅಂತಿಮ ವಿನ್ಯಾಸ ಅನುಮೋದನೆ ನೀಡಬೇಕೆಂದು ಕೋರಿರುತ್ತಾರೆ.

ಅರ್ಜಿದಾರರು ಈ ಪ್ರಕರಣದ ಸಂಬಂಧ ಕಛೇರಿಗೆ ಮಾಹಿತಿ ನೀಡಿ ಒ.ಎಸ್.723/2012 ರ ಸಂಬಂಧ ನ್ಯಾಯಾಲಯದ ಒಳಗೆ ಪ್ರಕರಣವನ್ನು ಇತ್ಯರ್ಥಗೊಳಿಸಿಕೊಡುವುದಾಗಿ ಶ್ರೀ ವೆಂಕಟರಮಣ ರವರು ಅರ್ಜಿ ಸಲ್ಲಿಸಿದ್ದ ಆಧಾರದ ಮೇಲೆ 1ನೇ ಅಧಿಕ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ತುಮಕೂರು ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿದೆ.

"Suit is dismissed as not pressed however no permission granted to fight fresh suit if necessary"

ಆದರೆ ದಿನಾಂಕ 05-05-2012 ರಂದು ಶ್ರೀ ವೆಂಕಟರಮಣರವರು ನೀಡಿರುವ ಪತ್ರದಂತೆ ಒ.ಎಸ್.ನಂ.19/12 ಆಗಿದ್ದು, ಈ ಸಂಬಂಧ ಹೆಚ್ಚಿನ ಮಾಹಿತಿ ಅಗತ್ಯವಿದ್ದು, ಅಂತಿಮ ವಿನ್ಯಾಸಕ್ಕೆ ಅನುಮೋದನೆಯನ್ನು ನೀಡುವುದು ಸೂಕ್ತವಾಗಿರುವುದಿಲ್ಲ. ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಪ್ರಸ್ತಾವಿತ ಪ್ರದೇಶದ ಸ್ಥಳ ಪರಿಶೀಲನೆ ಮಾಡಲಾಯಿತು. ಸದರಿ ವಸತಿ ವಿನ್ಯಾಸದಲ್ಲಿ ನಿರ್ವಹಿಸಬೇಕಾದ ಅಗತ್ಯ ಕಾಮಗಾರಿಗಳನ್ನು ನಿರ್ವಹಿಸುವಂತೆ ದಿನಾಂಕ 21-09-2012 ರಂದು ಈ ಕಾರ್ಯಾದೇಶ ಸಂಖ್ಯೆ ಟಿಯುಡಿಎ/ಸಕಾಇ/ಎಲ್ಎಒ/307/2011-12 ರಂತೆ ನೀಡಲಾಗಿತ್ತು. ವಸತಿ ವಿನ್ಯಾಸದಲ್ಲಿ ಡಾಂಬರೀಕರಿಸಿದ ರಸ್ತೆ, ಕಾಂಕ್ರೀಟ್ ಚರಂಡಿ, ನೀರು ಸರಬರಾಜು ಒಳಚರಂಡಿ ವ್ಯವಸ್ಥೆ, ಉದ್ಯಾನವನ ಮತ್ತು ವಿದ್ಯುಚ್ಛಕ್ತಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬೇಕೆಂದು ಈ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರವರು ವರದಿ ನೀಡಿರುತ್ತಾರೆ. ದಿನಾಂಕ 05-05-2012 ರಂದು ಶ್ರೀ ವೆಂಕಟರಮಣರವರು ನೀಡಿರುವ ಪತ್ರದಂತೆ ಮಾನ್ಯ 1ನೇ ಅಧಿಕ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ತುಮಕೂರು ನ್ಯಾಯಾಲಯದಲ್ಲಿ ಒ.ಎಸ್.ನಂ.19/2012 ರಲ್ಲಿ ಪ್ರಕರಣ ದಾಖಲಾಗಿರುವುದರಿಂದ ವಿನ್ಯಾಸ ಅನುಮೋದನೆ ನೀಡಬಾರದೆಂದು ಕೋರಿರುತ್ತಾರೆ. ಈ ಸಂಬಂಧ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸುವ ಅಗತ್ಯವಿದ್ದು, ಅಂತಿಮ ವಿನ್ಯಾಸಕ್ಕೆ ಅನುಮೋದನೆಯನ್ನು ನೀಡುವುದು ಸೂಕ್ತವಾಗಿರುವುದಿಲ್ಲ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ತುಮಕೂರು ನಗರದ ಬಡ್ಡಿಹಳ್ಳಿ ಗ್ರಾಮದ ಸರ್ವೆ ನಂಬರ್ 42/11 ರಲ್ಲಿ ಒಟ್ಟು 0-39.04 ಗುಂಟೆ ಪ್ರದೇಶಕ್ಕೆ ಈ ಕಛೇರಿಯ ಪ್ರಾಥಮಿಕ ವಿನ್ಯಾಸ ಅನುಮೋದನೆ ದಿನಾಂಕ 05-05-2012 ರನ್ವಯ ಶೇಕಡ 60 ರಷ್ಟು ನಿವೇಶನಗಳನ್ನು ಅರ್ಜಿದಾರರಾದ ಶ್ರೀಮತಿ ವಿಶಾಲಕ್ಷಮ್ಮ ಎಂಬುವವರ ಹೆಸರಿಗೆ ಬಿಡುಗಡೆ

ಮಾಡಲಾಗಿರುತ್ತದೆ. ಸದರಿ ವಿನ್ಯಾಸದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದರಿಂದ ಬಾಕಿ ಉಳಿದಿರುವ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಸಂಬಂದ ಶ್ರೀಮತಿ ವಿಶಾಲಕ್ಷಮ್ಮ ನವರು ಅರ್ಜಿ ಸಲ್ಲಿಸಿರುತ್ತಾರೆ. ಈ ಸಂಬಂಧ ದಿನಾಂಕ 05-05-2012 ರಂದು ಶ್ರೀ ವೆಂಕಟರಮಣ ಎಂಬುವವರು ವಕೀಲರಿಂದ ಪತ್ರವನ್ನು ನೀಡಿ, ವಸತಿ ವಿನ್ಯಾಸವನ್ನು ಅನುಮೋದನೆಗೊಳಿಸಬಾರದೆಂದು ತಿಳಿಸಿರುವ ಅಂಶವನ್ನು ಪರಿಗಣಿಸಿ, ಮಾನ್ಯ 1ನೇ ಅಧಿಕ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ತುಮಕೂರು ನ್ಯಾಯಾಲಯದಲ್ಲಿ ದಾಖಲಾಗಿರುವ ಒ.ಎಸ್.ನಂ. 19/2012 ರ ಪ್ರಕರಣದಲ್ಲಿ ಯಾವುದೇ ಆದೇಶವಾಗಿರುವ ಬಗ್ಗೆ ಮಾಹಿತಿ ಪಡೆದು, ಈ ಸಂಬಂಧ ಪ್ರಾಧಿಕಾರದ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಅದರಂತೆ ಅಂತಿಮ ವಿನ್ಯಾಸ ಅನುಮೋದನೆ ಸಂಬಂಧ ಕ್ರಮಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 22** ತುಮಕೂರು ನಗರದ ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 235 ರಲ್ಲಿ 7 ಎಕರೆ 10 ಗುಂಟೆ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಪ್ರಾಥಮಿಕ ವಿನ್ಯಾಸ ಅನುಮೋದನೆ ನೀಡಿರುವುದನ್ನು ರದ್ದುಪಡಿಸುವ ಸಂಬಂಧ ಕಾನೂನು ಅಭಿಪ್ರಾಯ ನೀಡಿರುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 235 ರಲ್ಲಿ 7 ಎಕರೆ 10 ಗುಂಟೆ ಭೂಪರಿವರ್ತಿತಯಾಗಿರುವ ಜಮೀನಿಗೆ ವಿನ್ಯಾಸ ಅನುಮೋದನೆಯನ್ನು ದಿನಾಂಕ 21-05-2011 ರಂದು ನಡೆದ ಪ್ರಾಧಿಕಾರ ಸಭೆಯ ವಿಷಯ ಸಂಖ್ಯೆ 78 ರಲ್ಲಿ ಪ್ರಸ್ತಾವಿತ ಜಮೀನಿಗೆ ವಿನ್ಯಾಸ ಅನುಮೋದನೆ ನೀಡಬಹುದೆಂದು ತೀರ್ಮಾನಿಸಿರುತ್ತದೆ. ಪ್ರಸ್ತಾವಿತ ಜಮೀನಿಗೆ ಸಾರ್ವಜನಿಕ ರಸ್ತೆ ಸಂಪರ್ಕವಿಲ್ಲದ ಕಾರಣ ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 235 ರಲ್ಲಿ 7 ಎಕರೆ 10 ಗುಂಟೆ ಪ್ರದೇಶದಲ್ಲಿ ರಚಿಸಲಾಗುತ್ತಿರುವ ವಸತಿ ವಿನ್ಯಾಸದ ಭೂಮಾಲೀಕರಾದ ಶ್ರೀ ಎಸ್.ಪುಟ್ಟೀರಪ್ಪ ರವರು ಈ ಜಮೀನಿಗೆ ಹೊಂದಿಕೊಂಡಂತೆ ಇದ್ದ ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 276/4, 276/5, 238/1, 238/6, 268/13 ಮತ್ತು 238/19 ರ ಜಮೀನಿನ ಮಾಲೀಕರುಗಳಿಂದ ತಮ್ಮ ಜಮೀನಿಗೆ ರಸ್ತೆ ಸಂಪರ್ಕ ಕಲ್ಪಿಸುವ ಸಲುವಾಗಿ 855 ಚದುರ ಮೀಟರ್ ಪ್ರದೇಶವನ್ನು ಸಂಪರ್ಕ ರಸ್ತೆಗಾಗಿ ದಾನ ಪತ್ರದ ಮೂಲಕ ನೀಡಲು ಸಂಬಂಧಪಟ್ಟ ಭೂಮಾಲೀಕರಿಂದ ಅರ್ಜಿ ಹಾಗೂ ದಾನಪತ್ರ ಪಡೆದು ದಿನಾಂಕ 28-05-2011 ರಂದು ಪ್ರಾಧಿಕಾರಕ್ಕೆ ಹಸ್ತಾಂತರಿಸಿ, ಉಪನೊಂದಣಾಧಿಕಾರಿಗಳಿಗೆ ಕಳುಹಿಸಿಕೊಡುವಂತೆ ಕೋರಿರುತ್ತಾರೆ. ಈ ದಾನಪತ್ರ ಮತ್ತು ದಾಖಲೆಗಳನ್ನು ಪರಿಶೀಲಿಸಿದ ಯೋಜನಾ ಶಾಖೆಯ ನಗರ ಯೋಜಕರು, ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು ಮತ್ತು ನಗರ ಯೋಜನಾ ಸದಸ್ಯರು ರಸ್ತೆಯ ಪ್ರದೇಶವನ್ನು ಪ್ರಾಧಿಕಾರದ ಹೆಸರಿಗೆ ನೊಂದಣಿ

ಮಾಡಿಕೊಳ್ಳಬಹುದೆಂದು ಕಡತವನ್ನು ಮಂಡಿಸಿ, ನನ್ನ ಸಹಿ ಪಡೆದು ರಾಜ್ಯಪಾಲರ ಪರವಾಗಿ ಪ್ರಾಧಿಕಾರಕ್ಕೆ ನೊಂದಣಿ ಮಾಡಿಕೊಡಲು ದಿನಾಂಕ 28-11-2011 ರಂದು ಉಪನೊಂದಣಾಧಿಕಾರಿಗಳು, ತುಮಕೂರು ತಾಲ್ಲೂಕು, ತುಮಕೂರು ರವರಿಗೆ ಕಳುಹಿಸಿಕೊಡಲಾಗಿತ್ತು. ನಂತರ ಶ್ರೀಮತಿ ಜಿ.ಎಲ್.ಲಲಿತಾದೇವಿ ರವರು ತಾವು ಸಂಪರ್ಕ ರಸ್ತೆಗಾಗಿ ನೀಡಿರುವ ಪ್ರದೇಶದ ಅರ್ಜಿ ಅಥವಾ ದಾನಪತ್ರಕ್ಕೆ ಸಹಿ ಮಾಡಿರುವುದಿಲ್ಲವೆಂದು ತನ್ನ ಪರವಾಗಿ ಬೇರೆ ಮಹಿಳೆಯಿಂದ ಸಹಿ ಮಾಡಿಸಿಕೊಂಡು ದಾನಪತ್ರ ನೊಂದಾಯಿಸಿಕೊಳ್ಳಲಾಗಿದೆ ಎಂದು ಕ್ಯಾತ್ಸಂದ್ರ ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಈ ಹಿನ್ನೆಲೆಯಲ್ಲಿ ಅನುಮೋದಿತ ವಿನ್ಯಾಸವನ್ನು ರದ್ದುಗೊಳಿಸುವ ಸಂಬಂಧ ದಿನಾಂಕ 18-08-2012 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 23 ರಲ್ಲಿ ಪ್ರಾಧಿಕಾರದ ಅನುಮೋದನೆಗಾಗಿ ಮಂಡಿಸಲಾಗಿತ್ತು. ಸಭೆಯ ವಿಷಯವನ್ನು ಚರ್ಚಿಸಿ, ಪ್ರಾಧಿಕಾರದ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಅವರ ಸಲಹೆಯಂತೆ ಪ್ರಾಥಮಿಕ ವಿನ್ಯಾಸ ರದ್ದುಪಡಿಸಲು ಮುಂದಿನ ಕ್ರಮಕೈಗೊಳ್ಳಲು ತೀರ್ಮಾನಿಸಲಾಗಿತ್ತು.

ಸಭೆಯ ತೀರ್ಮಾನದಂತೆ ಪ್ರಾಧಿಕಾರದ ವಕೀಲರಾದ ಶ್ರೀ ಪಿ.ಎಸ್.ಮಂಜುನಾಥ್ ರವರನ್ನು ಕೋರಲಾಗಿದ್ದು, ಸದರಿ ಕಾನೂನು ಸಲಹೆಗಾರರು ದಿನಾಂಕ 24-09-2012 ರಂದು ತಮ್ಮ ಕಾನೂನು ಸಲಹೆಯನ್ನು ನೀಡಿದ್ದು, ವಿವರ ಈ ಕೆಳಕಂಡಂತಿದೆ.

Putteerappa informed the Authority that he has negotiated with the owners of Sy.Nos.276/4, 276/5, 238/1, 238/6, 238/13 and 238/19 and each of the owners have agreed to donate to the Authority certain extents of land which could be utilized for the purpose of formation of approach road to the layout. Accordingly, Putteerappa produced before the Authority the gift deed executed by the persons said to be owners of the said lands. On the basis of the said gift deed and other materials on record, the Authority has sanctioned the layout on 30.11.2011.

It now transpired that one Smt.Lalitha Devi claiming to be the khatedar of Sy.No.476/5 has filed a police complaint alleging that she has been impersonated before the Sub-Registrar and the she is not be executant of the gift deed in

respect of 91 Sq.mtrs, in Sy.No.276/5. It also appears that on the basis of the said complaint, a case has been registered against the Commissioner under section 420 and other related provisions of the Indian Penal Code.

It is apparent that Putteerappa prima facie has played fraud on the Authority for the purpose of obtaining the approval for the layout. He appears to have created a gift deed. Possibility of some more persons claiming that they are the owners of the land and they have also been impersonated in execution of the gift deed cannot be ruled out.

It is clear that but for the land being made available for formation of approach road, the layout in Sy.No.235 of Shettihally in an extent of 7 acres 10 guntas would not have been approved by the Authority. Putterappa has apparently played fraud on the Authority to persuade it to grant the approval bonafide believing that the land is available for formation of an approach road.

Under the provisions of Section 32 of the Karnataka Urban Development Authorities Act which enables grant of permission to formation of a private layout or provisions of Section 17 of the Karnataka Town & Country Planning Act which also enables grant of permission for formation of a private layout. No power is reserved for cancellation of the approval granting for layout on the ground of fraud or non-disclosure of vital information or any other vital information which would have vitally affected the decision making process for grant of layout.

In the absence of any specific power either under the Karnataka Urban Development Authorities Act or under the Karnataka Town & Country Planning Act, one has to fall back of Section 21 of the Karnataka General Clauses Act which reads as follows;

*"21. Power to make to include power to add to, amend, vary or rescind notification, orders, rules or by-laws- Where, by any enactment, a power to issue notifications, orders, rules or by-laws is conferred, then that power includes a power, exercisable in the like manner and subject to the like sanction and conditions, if any, to add to amend, vary or rescind any notification, orders, rules or bye-laws to issued".*

The grant of layout is controlled by Section 32(5) of the Karnataka Urban Development Authorities Act and also Section 17 of the Karnataka Town & Country Planning Act and the permission granted for formation of layout is an order of the Authority in exercise of the power either under section 32(5) of the Karnataka Urban Development Authorities Act or under section 17 of the Karnataka Town & Country Planning Act and therefore in the instant case also after issuing a notice to Putteerappa to show cause as to why sanction granted for formation of the private layout should not be cancelled for the reason that he had misled the Authority in granting approval for layout on the ground that the land is available for formation of an access road to the layout.

In the instant case, notice has already been issued to Putteerappa to show-cause as to why approval granted for the layout should not be revoked. The show-cause notice has been received by Putteerappa on 10.08.2012 and he has not replied within ten days from the date of the receipt of the notice.

In the circumstances, the Authority may proceed to pass an appropriate resolution to cancel the layout in exercise of the powers under section 21 of the Karnataka General Clauses Act. The cancellation order undoubtedly cannot be passed

by the Commissioner, it could be done only by the resolution of the Authority. After the Authority takes a decision, the decision may be communicated under acknowledgment to Putteerappa and thereafter necessary steps may be taken to prevent the formation of layout on the land in question.

ಇದೇ ರೀತಿ ವಿನ್ಯಾಸ ಅನುಮೋದನೆಯನ್ನು ರದ್ದುಗೊಳಿಸುವ ಸಂಬಂಧ ಹಿರಿಯ ನ್ಯಾಯವಾದಿಗಳಾದ ಉದಯಹೊಳ್ಳ ರವರು ದಿನಾಂಕ 26-09-2012 ರಂದು ನೀಡಿರುವ ಕಾನೂನು ಸಲಹೆ ಕೆಳಕಂಡಂತಿರುತ್ತದೆ.

1. On 12.5.2011, one Mr. Putteerappa, a resident of Tumkur applied for combined sanction of residential layout plan for the property bearing S.No.235, measuring 7 acres 10 guntas, situated in Shettihalli Village, Kasaba Hobli, Tumkur Taluk and District. Pursuant to the request for layout permission, the Committee of the Tumkur Urban Development Authority (for short "TUDA") comprising of various government officials, including the President and Commissioner of TUDA held a meeting and in its meeting dated 21.5.2011 decided to sanction the layout plan in favour of the said Mr. Putteerappa in respect of the aforesaid property. On demand of TUDA Mr. Putteerappa paid the applicable fee towards the layout approval on 16.9.2011 to TUDA.

2. In terms of Master Plan of 2031, the approach road to the proposed layout of Mr. Putteerappa would be from S.Nos.238/1, 238/10, 238/13, 238/19, 276/4 and 276/5 of Shettihalli Village. As the said lands were owned by different owners and with an intention to get the approach to his proposed layout, Mr. Putteerappa informed the TUDA that he will get the approach road from their respective owners of the aforesaid survey numbers on whose properties, the proposed approach road would run in terms of Master Plan of 2031 and will get the appropriate deeds from them in respect of the same.

3. Pursuant to the same, the concerned owners of the aforesaid survey numbers gave no-objection letters to the TUDA stating that they do not have any objections to form the approach road on their aforesaid lands and further stated that they will relinquish the said area free of cost in favour of the TUDA. Among the owners, one Smt. G. L. Lalithadevi (claiming to be the owner of S.No.276/5 of Shettihalli Village) also gave the letter of no-objection for formation of approach road on her land.

4. Pursuant to the same, the said Mr. Putteerappa submitted the gift deed which was signed by all the above owners of the aforesaid lands in order to relinquish certain portions of the aforesaid lands for the purpose of approach road to TUDA in terms of Master Plan of 2031 and requested the Commissioner to send the said gift deed for registration. The gift deed was examined by the planning section comprising of Town Planner, Asst. Director of Town Planning and Town Planning member. Then the file sent for the signature of Commissioner. The Commissioner signed the said document and sent the same to the office of the Sub Registrar, Tumkur with his covering letter dated 28.11.2011 and sought for his exemption under Section 88(1) of the Registration Act and requested the Sub Registrar for registration of the said gift deed dated 28.11.2011. Accordingly, the said gift deed was registered on 29.11.2011 as Document No.TMK-1-14226/2011-12 of Book I and stored in CD No.29.11.2011 in the office of the Sub Registrar, Tumkur.

5. On 29.11.2011, Mr. Putteerappa by his letter requested TUDA to issue the approved lay out plan by producing the registered gift deed dated 28.11.2011. Accordingly TUDA issued the layout plan vide its order dated 30.11.2011 in favour of the said Mr. Putteerappa in respect of the property bearing S.No.235 of Shettihalli Village.

6. When things stood thus, Smt. G. L. Lalitha Devi claiming that she had not executed the gift deed dated 28.11.2011 (Document No.14226/2011-12) and that she has been impersonated in the said gift deed had lodged a police complaint before the Kyathasandra Police Station against the Commissioner of TUDA and two other persons. Pursuant to the same, the Kyathasandra Police has registered a FIR in Crime No.0249/2012 for the offences under Sections 465, 468, 471, 419, 420 and 34 of Indian Penal Code against the Commissioner & others.

7. Due to the above incident, the Commissioner wrote a letter to the Sub Registrar, Tumkur not to register any documents pertaining to the above layout as they are initiating appropriate actions to cancel the layout plan. The Commissioner had also issued a show cause notice dated 08.08.2012 to the said Mr. Putteerappa asking him why an action to revoke the layout plan/permission dated 30.11.2011 be initiated against him by the TUDA as TUDA felt that Mr. Putteerappa has obtained the layout permission by playing fraud upon TUDA.

8. In the light of the above background, TUDA raised the following query for our opinion:

(i) **Whether TUDA can revoke the layout approval plan dated 30.11.2011 issued by TUDA in favour of Mr. Putteerappa in respect of S.No.235, measuring 7 acres 10 guntas of Shettihalli Village, Tumkur Taluk and District?**

(ii) **If yes, what is the procedure to be followed to revoke the layout approval plan dated 30.11.2011 issued by TUDA in favour of Mr. Putteerappa in respect of S.No.235, measuring 7 acres 10 guntas of Shettihalli Village, Tumkur Taluk and District?**

Our answers to the above queries are as follows:

**9. Re. Query No.(i):**

The approved layout plan was issued in favour of Mr. Putteerappa under Section 17(2) of the Karnataka Town and Country Planning Act, 1961 and Section 32 of the Karnataka Urban Development Authorities Act, 1987. Though the provisions of Karnataka Town and Country Planning Act, 1961 and the Karnataka Urban Development Authorities Act, 1987 (hereinafter "UDA Act") empower Urban Development Authorities to sanction layout approvals, the same do not confer powers to the sanctioning authority to revoke the same.

Section 21 of the General Clauses Act, 1897 states that power to issue notification, orders, rules or bye-laws is conferred, then that power, includes a power exercisable in the like manner and subject to the like sanction and conditions to add to, amend, vary or rescind notifications, orders, rules or bye-laws to. Hence though the provisions of UDA Act and Town Planning Act do not confer the power to revoke the license by the sanctioning authority, by exercising power under Section 21 of General Clauses Act, TUDA can revoke the layout approved plan issued in favour of Mr. Putteerappa.

However, Condition No.15 of the layout approval plan dated 30.11.2011 issued by TUDA specifically states that the layout approval plan will be terminated automatically in case of submission of any false documents by the owner to obtain the layout approval. In view of the same, TUDA has authority to revoke the layout approval plan on this ground itself.

On lodging of the criminal complaint dated 05.08.2012 by the original owner of S.No.276/5 (Smt.G.L.Lalithadevi), TUDA came to know that the layout approval plan was

obtained by playing fraud upon TUDA. Hence TUDA has ample power to revoke the layout approval plan on the ground that the same has been obtained by Mr.Putteerappa by playing fraud upon TUDA.

However, the principle of natural justice mandates to issue a notice by TUDA before any order of revocation is issued. In the instant case, TUDA has already issued a show cause notice dated 08.08.2012 to Mr.Putteerappa calling upon him to show cause why an action to revoke the layout plan/permission dated 30.11.2011 be initiated against him by the TUDA as he has played fraud upon TUDA and hence TUDA has complied with the principles of natural justice. But till date, Mr.Putteerappa has not filed any reply to the same and hence it is deemed that he has played fraud upon TUDA and has obtained layout approval plan. In view of the same, TUDA has power to revoke the layout approval plan dated 30.11.2011 in respect of the aforesaid property on the aforesaid grounds.

**10. Re. Query No.(ii):**

In terms of Section 32 of the Karnataka Urban Development Authorities Act, 1987, it is the Authority which is conferred with the power to grant layout approval plan.

Sub-section (a) of Section 2 of the Karnataka Urban Development Authorities Act, 1987 defines the word "Authority" as follows:

"Authority means the Urban Development Authority constituted under Section 3 of the Act."

Section 3 of the UDA Act states about the constitution and incorporation of the Authority. The Authority consists the followings members, namely:-

a) The Chairman;

b) a Town Planner, who shall be an Officer of the Dept. of Town Planning, not below the rank of an Assistant Director of Town Planning;

c) an Engineer, who shall be an Officer of the Karnataka Engineering Service not below the rank of an Executive Engineer;

d) members of the Karnataka Legislative Assembly representing a part or [whole of the urban area and members of the Karnataka Legislative Council who are the permanent residents of the urban area concerned;]

e) a representative of the Karnataka Urban Water Supply and Drainage Board;

f) a representative of the Karnataka Electricity Board;

g) Commissioner of the Corporation or Municipal Commissioner or Chief Officer of the Municipal Council, *ex officio*;

h) Deputy Commissioner of the District, *ex officio;*

i) an elected member of the Local Authority concerned;

j) The Commissioner of the Police or the Superintendent of Police of the District, as the case may be, having jurisdiction over the Urban Area concerned, *ex officio;*

k) an Officer from the Karnataka Health and Family Welfare Department not below the rank of a District Health Officer;

l) a person having experience in Architecture;

m) four persons including a woman and a person belonging to the Scheduled Tribe;

n) The Commissioner, *ex officio;*

As the Authority constituted by the Act is consisting of the aforesaid members, the sanction of layout plan should be given by the Authority as a whole and the decision to revoke the approved layout plan has to be taken by the Authority. Though the show cause notice dated 08.08.2012 was issued by the Commissioner alone, the same can be ratified by the Authority in its meeting to be held for taking decision to revoke the layout approval as Mr. Putteerappa has failed to reply to the show cause notice issued by TUDA despite providing sufficient time to him.

ಕಾನೂನು ಸಲಹೆಗಾರರು ತಮ್ಮ ಅಭಿಪ್ರಾಯದಲ್ಲಿ ತುಮಕೂರು ನಗರದ ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 235 ರ ವಸತಿ ವಿನ್ಯಾಸವನ್ನು ಈಗಾಗಲೇ ಅನುಮೋದಿಸಿರುವ ಪ್ರಾಥಮಿಕ ವಿನ್ಯಾಸ ಅನುಮೋದನೆಯ ಆದೇಶದ ಷರತ್ತು ಸಂಖ್ಯೆ 15 ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 17, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ಕಲಂ 32 ರಲ್ಲಿ ಅಂತರ್ಗತವಾಗಿರುವ ಅಧಿಕಾರ ಕರ್ನಾಟಕ ಸಾಮಾನ್ಯ ನಿಯಮಾವಳಿಗಳ ಕಾಯ್ದೆ ಕಲಂ 21 ರಂತೆ ಪ್ರಾಧಿಕಾರವು ರದ್ದುಪಡಿಸಬಹುದೆಂದು ತಿಳಿಸಿರುವ ಹಿನ್ನೆಲೆಯಲ್ಲಿ ತೀರ್ಮಾನಕ್ಕಾಗಿ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸರ್ವೆ ನಂಬರ್ 276/ ರ ಭೂ ಮಾಲೀಕರು ತಾವು ಉದ್ದೇಶಿತ ವಸತಿ ವಿನ್ಯಾಸದ ಸಂಪರ್ಕ ರಸ್ತೆಗಾಗಿ ಅಗತ್ಯ ಭೂ ಪ್ರದೇಶವನ್ನು ದಾನ ನೀಡಿಲ್ಲವೆಂದು ತಿಳಿಸಿರುವ ಕಾರಣ ಪ್ರಸ್ತಾವಿತ ವಸತಿ ವಿನ್ಯಾಸಕ್ಕೆ ಸಂಪರ್ಕ ರಸ್ತೆಯಿಲ್ಲದಂತಾಗಿರುತ್ತದೆ. ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 235 ರ ವಸತಿ ವಿನ್ಯಾಸವನ್ನು ಈಗಾಗಲೇ ಅನುಮೋದಿಸಿರುವ ಪ್ರಾಥಮಿಕ ವಿನ್ಯಾಸ ಅನುಮೋದನೆಯ ಆದೇಶದ ಷರತ್ತು ಸಂಖ್ಯೆ 15 ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 17, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ಕಲಂ 32, 33, 34 ರಲ್ಲಿ ಅಂತರ್ಗತವಾಗಿರುವ ಅಧಿಕಾರ ಹಾಗೂ Karnataka General Act Section 21 ರಂತೆ ಪ್ರಾಧಿಕಾರವು ರದ್ದುಪಡಿಸಬಹುದೆಂದು ಕಾನೂನು ಸಲಹೆಗಾರರು ತಮ್ಮ ಅಭಿಪ್ರಾಯ ನೀಡಿರುವ ಹಿನ್ನೆಲೆಯಲ್ಲಿ ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 235 ರಲ್ಲಿ ಪ್ರಾಥಮಿಕ ಅನುಮೋದನೆ ನೀಡಿರುವ ವಿನ್ಯಾಸವನ್ನು ರದ್ದುಪಡಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿ ಆದೇಶ ಹೊರಡಿಸಲು ಕ್ರಮಕೈಗೊಳ್ಳುವಂತೆ ಆಯುಕ್ತರಿಗೆ ಅಧಿಕಾರ ನೀಡಲಾಯಿತು. ವಿನ್ಯಾಸ ರದ್ದತಿ ಆದೇಶವನ್ನು ವಿನ್ಯಾಸದ ಮಾಲೀಕರಿಗೆ ತಿಳಿಸಲು ಮತ್ತು ರದ್ದುಗೊಂಡಿರುವ ಮಾಹಿತಿಯನ್ನು ಸಾರ್ವಜನಿಕರ ಗಮನಕ್ಕೆ ತರಲು ಅಗತ್ಯ ಕ್ರಮಕೈಗೊಳ್ಳಲು ಸಹ ತೀರ್ಮಾನಿಸಿತು.

**ವಿಷಯ ಸಂಖ್ಯೆ 23**

ತುಮಕೂರು ನಗರದ ಸತ್ಯಮಂಗಲ ಗ್ರಾಮದ ಸರ್ವೆ ನಂಬರ್ 2 ರಲ್ಲಿ 2 ಎಕರೆ 08 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ವಿನ್ಯಾಸದಲ್ಲಿ ಬಾಕಿ ಇರುವ ಸಿವಿಲ್ ಕಾಮಗಾರಿಗಳನ್ನು ಪೂರೈಸಲು ಕಾಲಾವಕಾಶ ನೀಡುವ ಬಗ್ಗೆ.

**ಟಿಪ್ಪಣಿ**

ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ತುಮಕೂರು ನಗರದ ಸತ್ಯಮಂಗಲ ಗ್ರಾಮದ ಸರ್ವೆ ನಂಬರ್ 2 ರಲ್ಲಿ ಒಟ್ಟು 2 ಎಕರೆ 08 ಗುಂಟೆ ವಿಸ್ತೀರ್ಣದ ವಸತಿ ವಿನ್ಯಾಸಕ್ಕೆ ದಿನಾಂಕ 13-01-2009 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 21 ರ ನಿರ್ಣಯದನ್ವಯ ವಿನ್ಯಾಸವನ್ನು ಅನುಮೋದನೆ ನೀಡಿ, ವಿನ್ಯಾಸ ಅನುಮೋದನೆಗೆ ದಿನಾಂಕ 30-06-2009

ರಂದು ಶೇಕಡ 60 ರಷ್ಟು ನಿವೇಶನಗಳನ್ನು ಅರ್ಜಿದಾರರಾದ ಶ್ರೀ ಕೆ.ನರಸಿಂಹಮೂರ್ತಿ ಇವರ ಹೆಸರಿಗೆ ಬಿಡುಗಡೆ ಮಾಡಲಾಗಿತ್ತು. ಸದರಿ ವಸತಿ ವಿನ್ಯಾಸದಲ್ಲಿ ನಿರ್ವಹಿಸಬೇಕಾದ ಅಗತ್ಯ ಕಾಮಗಾರಿಗಳನ್ನು ನಿರ್ವಹಿಸುವಂತೆ ತಿಳಿಸಿ, ಅರ್ಜಿದಾರರಿಗೆ ದಿನಾಂಕ 28-07-2011 ರಂದು ತಿಳುವಳಿಕೆ ಪತ್ರ ನೀಡಲಾಗಿತ್ತು. ಆದರೆ ಈ ಬಗ್ಗೆ ಅರ್ಜಿದಾರರು ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಅರ್ಜಿದಾರರು ದಿನಾಂಕ 11-09-2012 ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಅವರ ಮನವಿಯಲ್ಲಿ ಸದರಿ ವಿನ್ಯಾಸದಲ್ಲಿ ಬರುವ ರಸ್ತೆ ಹಾಗೂ ಉದ್ಯಾನವನ ಇತರೆ ಸಿವಿಲ್ ಕಾಮಗಾರಿಗಳನ್ನು ಅಭಿವೃದ್ಧಿಪಡಿಸುವ ಸಾಧ್ಯವಾಗದ ಕಾರಣ ಮತ್ತು ಅನಾರೋಗ್ಯದ ಕಾರಣ ಸದರಿ ಕಾಮಗಾರಿಗಳನ್ನು ಅಭಿವೃದ್ಧಿಪಡಿಸಲು ಆರು ತಿಂಗಳ ಕಾಲಾವಕಾಶ ನೀಡಬೇಕೆಂದು ಕೋರಿರುತ್ತಾರೆ. ಪರಿಶೀಲಿಸಲಾಗಿ ಅರ್ಜಿದಾರರಿಗೆ ದಿನಾಂಕ 30-06-2009 ರಂದು ಪ್ರಾಧಿಕಾರದಿಂದ ಪ್ರಾಥಮಿಕ ವಿನ್ಯಾಸ ಅನುಮೋದನೆಯನ್ನು ನೀಡಲಾಗಿತ್ತು. ಸದರಿ ಆದೇಶ ಪತ್ರದ ಷರತ್ತುಗಳಂತೆ ಅರ್ಜಿದಾರರು ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಿಲ್ಲ. ಸದರಿ ಅವಧಿ ಮುಗಿದ ನಂತರ ಅರ್ಜಿದಾರರ ಮನವಿಯನ್ನು ಪರಿಗಣಿಸಲು ಹಾಗೂ ಕಾಲಾವಕಾಶ ನೀಡಲು ಸೂಕ್ತವಾಗಿರುವುದಿಲ್ಲ. ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ತುಮಕೂರು ನಗರದ ಸತ್ಯಮಂಗಲ ಗ್ರಾಮದ ಸರ್ವೆ ನಂಬರ್ 2 ರಲ್ಲಿ ಒಟ್ಟು 2 ಎಕರೆ 08 ಗುಂಟೆ ವಿಸ್ತೀರ್ಣದ ಪ್ರಾಥಮಿಕ ವಿನ್ಯಾಸಕ್ಕೆ ನೀಡಿರುವ ಆದೇಶ ಪತ್ರದ ಷರತ್ತುಗಳಂತೆ ಅರ್ಜಿದಾರರು ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಿಲ್ಲ. ಸದರಿ ಅವಧಿ ಮುಗಿದ ನಂತರ ಅರ್ಜಿದಾರರ ಮನವಿಯನ್ನು ಪರಿಗಣಿಸಲು ಹಾಗೂ ಕಾಲಾವಕಾಶ ನೀಡಲು ಸೂಕ್ತವಾಗಿರುವುದಿಲ್ಲ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ತುಮಕೂರು ನಗರದ ಸತ್ಯಮಂಗಲ ಗ್ರಾಮದ ಸರ್ವೆ ನಂಬರ್ 2 ರಲ್ಲಿ ಒಟ್ಟು 2 ಎಕರೆ 08 ಗುಂಟೆ ವಿಸ್ತೀರ್ಣದ ಪ್ರಾಥಮಿಕ ವಿನ್ಯಾಸಕ್ಕೆ ನೀಡಿರುವ ಆದೇಶ ಪತ್ರದ ಷರತ್ತುಗಳಂತೆ ಅರ್ಜಿದಾರರು ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಿಲ್ಲ. ಸದರಿ ಅವಧಿ ಮುಗಿದ ನಂತರ ಅರ್ಜಿದಾರರ ಮನವಿಯನ್ನು ಪರಿಗಣಿಸಲು ಹಾಗೂ ಕಾಲಾವಕಾಶ ಇರುವುದಿಲ್ಲವೆಂಬ ಅಂಶವನ್ನು ಸಭೆಯು ಪರಿಗಣಿಸಿ, ಬಾಕಿ ಉಳಿದಿರುವ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಿ, ಅಂತಿಮ ವಿನ್ಯಾಸ ಅನುಮೋದನೆ ಪಡೆಯುವಂತೆ ಸೂಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಸಿತು.

**ವಿಷಯ ಸಂಖ್ಯೆ 24** ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಕರಡು ವಿನ್ಯಾಸ ಅನುಮೋದನೆಯಾಗಿರುವ ವಿನ್ಯಾಸದಲ್ಲಿ ಕಟ್ಟಡ ನಿರ್ಮಾಣಕ್ಕೆ ತಾಂತ್ರಿಕ ಅಭಿಪ್ರಾಯ ಕುರಿತು

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಖಾಸಗಿ ವಿನ್ಯಾಸಗಳಿಗೆ ಪ್ರಾಧಿಕಾರದಿಂದ ಈಗಾಗಲೇ ಕರಡು ವಿನ್ಯಾಸನಕ್ಕೆ ಅನುಮೋದನೆ ಮಾಡಿ ಶೇಕಡ 60 ರಷ್ಟು ನಿವೇಶನಗಳನ್ನು ಮಾರಾಟಕ್ಕೆ ಬಿಡುಗಡೆ ಮಾಡಲಾಗಿರುತ್ತದೆ. ಈ ರೀತಿಯ ಅರ್ಜಿದಾರರು ಅಂತಿಮ ವಿನ್ಯಾಸಕ್ಕೆ ಅನುಮೋದನೆ ಪಡೆಯದೆ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ. ಈ ರೀತಿ ಮಾರಾಟವಾದ ನಿವೇಶನಗಳು ನಗರ ಸಭೆ / ಗ್ರಾಮ ಪಂಚಾಯ್ತಿಗಳಲ್ಲಿ ಆಸ್ತಿ ತಃಖ್ತೆಯಲ್ಲಿ ನೊಂದಣಿಯಾಗಿರುತ್ತವೆ. ಈ ರೀತಿಯ ಕರಡು ವಿನ್ಯಾಸ ಅನುಮೋದಿತ ವಸತಿ ವಿನ್ಯಾಸದ ನಿವೇಶನಗಳಿಗೆ ಕಟ್ಟಡ ನಿರ್ಮಾಣಕ್ಕೆ ಅನುಮತಿಗಾಗಿ ನಗರ ಸಭೆ / ಗ್ರಾಮ ಪಂಚಾಯ್ತಿಯಿಂದ ಅರ್ಜಿ ಸಲ್ಲಿಸುತ್ತಿದ್ದು, ಸದರಿ ಸಂಸ್ಥೆಗಳು ತಾಂತ್ರಿಕ ಪರಿಶೀಲನೆಗಾಗಿ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಕಳುಹಿಸಿಕೊಡುತ್ತಿವೆ. ವಸತಿ ವಿನ್ಯಾಸಗಳ ಅಂತಿಮ ಅನುಮೋದನೆಯಾದ ಕಾರಣ ಇಂತಹ ಪ್ರಕರಣಗಳಿಗೆ ಅನುಮತಿ ನೀಡುತ್ತಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಸಾರ್ವಜನಿಕ ಪ್ರತಿನಿಧಿಗಳೂ ಸಹ ತಾಂತ್ರಿಕ ಅಭಿಪ್ರಾಯ ನೀಡುವಂತೆ ತಿಳಿಸುತ್ತಿದ್ದಾರೆ. ಆದುದರಿಂದ ಕರಡು ವಿನ್ಯಾಸದಲ್ಲಿನ ನಿವೇಶನಗಳಲ್ಲಿ ಖಾತೆಯಾಗಿ ಕಟ್ಟಡ ನಿರ್ಮಾಣಕ್ಕೆ ಸಲ್ಲಿಕೆಯಾಗುತ್ತಿರುವ ಪ್ರಕರಣಗಳಿಗೆ ಪ್ರಾಧಿಕಾರದಿಂದ ಅಂತಿಮ ವಿನ್ಯಾಸಕ್ಕೆ ಅನುಮೋದನೆಯಾಗದೇ ಕಟ್ಟಡ ನಿರ್ಮಾಣಕ್ಕೆ ತಾಂತ್ರಿಕ ಅಭಿಪ್ರಾಯ ನೀಡುವುದು ಸಮಂಜಸವಾಗಿರುವುದಿಲ್ಲ. ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಕರಡು ವಿನ್ಯಾಸ ಅನುಮೋದಿತ ವಸತಿ ವಿನ್ಯಾಸದ ನಿವೇಶನಗಳಿಗೆ ಕಟ್ಟಡ ನಿರ್ಮಾಣಕ್ಕೆ ಅನುಮತಿಗಾಗಿ ನಗರ ಸಭೆ / ಗ್ರಾಮ ಪಂಚಾಯ್ತಿಯಿಂದ ಅರ್ಜಿ ಸಲ್ಲಿಸುತ್ತಿದ್ದು, ಸದರಿ ಸಂಸ್ಥೆಗಳು ತಾಂತ್ರಿಕ ಪರಿಶೀಲನೆಗಾಗಿ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಕಳುಹಿಸಿಕೊಡುತ್ತಿವೆ. ವಸತಿ ವಿನ್ಯಾಸಗಳ ಅಂತಿಮ ಅನುಮೋದನೆಯಾದ ಕಾರಣ ಇಂತಹ ಪ್ರಕರಣಗಳಿಗೆ ಅನುಮತಿ ನೀಡುತ್ತಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಸಾರ್ವಜನಿಕ ಪ್ರತಿನಿಧಿಗಳೂ ಸಹ ತಾಂತ್ರಿಕ ಅಭಿಪ್ರಾಯ ನೀಡುವಂತೆ ತಿಳಿಸುತ್ತಿದ್ದಾರೆ. ಆದುದರಿಂದ ಕರಡು ವಿನ್ಯಾಸದಲ್ಲಿನ ನಿವೇಶನಗಳಲ್ಲಿ ಖಾತೆಯಾಗಿ ಕಟ್ಟಡ ನಿರ್ಮಾಣಕ್ಕೆ ಸಲ್ಲಿಕೆಯಾಗುತ್ತಿರುವ ಪ್ರಕರಣಗಳಿಗೆ ಪ್ರಾಧಿಕಾರದಿಂದ ಅಂತಿಮ ವಿನ್ಯಾಸಕ್ಕೆ ಅನುಮೋದನೆಯಾಗದೇ ಕಟ್ಟಡ ನಿರ್ಮಾಣಕ್ಕೆ ತಾಂತ್ರಿಕ ಅಭಿಪ್ರಾಯ ನೀಡುವುದು ಸೂಕ್ತವಾಗಿರುವುದಿಲ್ಲ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಆಯುಕ್ತರು ನಗರ ಯೋಜನಾ ಸದಸ್ಯರ ಅಭಿಪ್ರಾಯದಂತೆ ಕ್ರಮವಿಡುವುದು ಸೂಕ್ತವೆಂದು ಅಭಿಪ್ರಾಯ ನೀಡಿದರು. ಕರಡು ವಿನ್ಯಾಸ ಅನುಮೋದಿತ ವಸತಿ ವಿನ್ಯಾಸದ ನಿವೇಶನಗಳಿಗೆ ಕಟ್ಟಡ ನಿರ್ಮಾಣಕ್ಕೆ ಅನುಮತಿಗಾಗಿ ನಗರ ಸಭೆ / ಗ್ರಾಮ ಪಂಚಾಯ್ತಿಯಿಂದ ಅರ್ಜಿ ಸಲ್ಲಿಸುತ್ತಿದ್ದು, ಸದರಿ ಸಂಸ್ಥೆಗಳು ತಾಂತ್ರಿಕ ಪರಿಶೀಲನೆಗಾಗಿ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಕಳುಹಿಸಿಕೊಡುತ್ತಿವೆ. ವಸತಿ ವಿನ್ಯಾಸಗಳ ಅಂತಿಮ ಅನುಮೋದನೆಯಾದ ಕಾರಣ ಇಂತಹ ಪ್ರಕರಣಗಳಿಗೆ ಅನುಮತಿ ನೀಡುತ್ತಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಸಾರ್ವಜನಿಕ ಪ್ರತಿನಿಧಿಗಳೂ ಸಹ ತಾಂತ್ರಿಕ ಅಭಿಪ್ರಾಯ ನೀಡುವಂತೆ ತಿಳಿಸುತ್ತಿರುವ ಅಂಶವನ್ನು ಸಭೆಯು ಪರಿಗಣಿಸಿತು. ಇಂತಹ ಪ್ರಕರಣಗಳು ಅಕ್ರಮ-ಸಕ್ರಮ ವ್ಯಾಪ್ತಿಗೆ ಒಳಪಡುವುದಿಲ್ಲ. ದಿನಾಂಕ 14-08-2007 ರ ಸರ್ಕಾರದ ಅಧಿಸೂಚನೆ ಪ್ರಕಾರ ನಗರಾಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿನ ಅನಧಿಕೃತ ಬಡಾವಣೆಗಳು ಅನುಮೋದಿತ ನಕ್ಷೆಯಂತೆ ಬಡಾವಣೆ ನಿರ್ಮಿಸದಿದ್ದು, ಪ್ರಕರಣಗಳು ಹಾಗೂ ನಿಗಧಿತ ಭೂ-ಉಪಯೋಗದ ವಲಯ ನಿಯಮಗಳನ್ನು ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡಗಳನ್ನು ಸಹ ಸಕ್ರಮಗೊಳಿಸಬೇಕಾಗಿರುತ್ತದೆ. ಆದುದರಿಂದ ಕರಡು ವಿನ್ಯಾಸ ಅನುಮೋದನೆ ಪಡೆದು ಅಂತಿಮ ವಿನ್ಯಾಸ ಅನುಮೋದನೆ ಪಡೆಯದ ಪ್ರಕರಣಗಳು ಅಕ್ರಮ - ಸಕ್ರಮ ವ್ಯಾಪ್ತಿಗೆ ಬರುವುದಿಲ್ಲವಾದುದರಿಂದ ನಿವೇಶನ ಕೊಂಡಿರುವ ಸಾರ್ವಜನಿಕರು ತೊಂದರೆಗೆ ಒಳಗಾಗುವುದು ಸಮಂಜಸವಲ್ಲ ಎಂದು ಸಭೆಯು ಅಭಿಪ್ರಾಯ ಪಟ್ಟಿತು. ಅಂತಿಮ ವಿನ್ಯಾಸ ಅನುಮೋದನೆಗೆ ಖಾಸಗಿ ವಿನ್ಯಾಸದಾರರು ಕ್ರಮವಹಿಸದಿದ್ದಲ್ಲಿ ನಿಯಮಗಳಂತೆ ಪ್ರಾಧಿಕಾರವು ಕ್ರಮಕೈಗೊಳ್ಳಬೇಕಿತ್ತು. ಆದುದರಿಂದ ಪ್ರಾಧಿಕಾರದಿಂದ ಕರಡು ಅನುಮೋದನೆಯಾಗಿ ಅಂತಿಮ ವಿನ್ಯಾಸ ಅನುಮೋದನೆಯಾಗದ ಪ್ರಕರಣಗಳಲ್ಲಿ ತಾಂತ್ರಿಕ ಅಭಿಪ್ರಾಯ ನೀಡುವಾಗ ಈ ಹಿಂದೆ ಗ್ರಾಮ ಪಂಚಾಯ್ತಿಯಿಂದ ಪೂರ್ಣ ಪ್ರಮಾಣಕ್ಕೆ ಖಾಸಗಿ ವಿನ್ಯಾಸ ಅನುಮೋದನೆಗೊಂಡಿದ್ದು, ಎಲ್ಲಾ ನಿವೇಶನಗಳು ಬಿಡುಗಡೆಗೊಂಡು ಖಾತೆ ತೆರೆಯಲಾಗಿದ್ದರೆ ಮತ್ತು ನಗರ ಸಭೆಯಿಂದ ಖಾತಾ ತೆರೆಯಲಾಗಿದ್ದರೆ ಅಭಿವೃದ್ಧಿ ಶುಲ್ಕ / ದಂಡವನ್ನು ಪಾವತಿಸಿಕೊಂಡು ತಾಂತ್ರಿಕ ಅಭಿಪ್ರಾಯ ನೀಡುವುದೆಂದು ಸಭೆಯು ಬಹುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 25**

ಹೊರವರ್ತುಲ ರಸ್ತೆಗೆ ಲಗತ್ತಾಗಿರುವ ಶೆಟ್ಟಿಹಳ್ಳಿ ವಸತಿ ಬಡಾವಣೆಯಲ್ಲಿ ಪ್ರಾಧಿಕಾರದಿಂದ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣದಲ್ಲಿನ ಅಂಗಡಿ ಮಳಿಗೆಗಳನ್ನು ಮಾಸಿಕ ಗುತ್ತಿಗೆ ಆಧಾರದ ಮೇಲೆ ಬಹಿರಂಗ ಹರಾಜು ನಡೆಸುವ ಬಗ್ಗೆ.

**ಟಿಪ್ಪಣಿ**

ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 18-08-2012 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 26 ರಲ್ಲಿ ದಿನಾಂಕ 06-08-2012 ರಂದು ನಡೆಸಿದ ಹರಾಜಿನ ಬಿಡ್ ಮೊಬಲಗು ತಿರಸ್ಕರಿಸಿ, ಕೈಗೊಂಡ ತೀರ್ಮಾನವನ್ನು, ದಿನಾಂಕ 13-09-2012 ರಂದು ನಡೆದ ಸಭೆಯಲ್ಲಿ ಓದಿ ದಾಖಲಿಸಿರುವ ದರಗಳಂತೆ

ಮಳಿಗೆಗಳ ಹರಾಜನ್ನು ದಿನಾಂಕ 18-10-2012 ರಂದು ನಡೆಸಲು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಹೊರವರ್ತುಲ ರಸ್ತೆಗೆ ಲಗತ್ತಾಗಿರುವ ಶೆಟ್ಟಿಹಳ್ಳಿ ವಸತಿ ಬಡಾವಣೆಯಲ್ಲಿ ಪ್ರಾಧಿಕಾರದಿಂದ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣದಲ್ಲಿನ ಅಂಗಡಿ ಮಳಿಗೆಗಳನ್ನು ಮಾಸಿಕ ಗುತ್ತಿಗೆ ಆಧಾರದ ಮೇಲೆ ಬಹಿರಂಗ ಹರಾಜನ್ನು ದಿನಾಂಕ 18-10-2012 ರಂದು ನಡೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 26** ತುಮಕೂರು ನಗರದ ಸತ್ಯಮಂಗಲ ಗ್ರಾಮದ ಸರ್ವೆ ನಂಬರ್ 148/1 ರಲ್ಲಿ ವಿಸ್ತೀರ್ಣ 0-15$^1/_2$ ಗುಂಟೆ ಪ್ರದೇಶದಲ್ಲಿ ಖಾಸಗಿ ವಸತಿ ವಿನ್ಯಾಸದಲ್ಲಿ ಉಳಿದಿರುವ ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ತುಮಕೂರು ನಗರದ ಸತ್ಯಮಂಗಲ ಗ್ರಾಮದ ಸರ್ವೆ ನಂಬರ್ 148/1 ರಲ್ಲಿ ವಿಸ್ತೀರ್ಣ 0-15$^1/_2$ ಗುಂಟೆ ಜಮೀನಿಗೆ ಪ್ರಾಧಿಕಾರದ ದಿನಾಂಕ 13-01-2010 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 06 ರ ನಿರ್ಣಯದನ್ವಯ ಸದರಿ ಜಮೀನಿಗೆ ವಿನ್ಯಾಸ ಅನುಮೋದನೆ ನೀಡಿ ಈ ಕಛೇರಿಯ ವಿನ್ಯಾಸ ಅನುಮೋದನೆ ಸಂಖ್ಯೆ ಟಿಯುಡಿಎ/ಎಲ್‌ಎಒ/52/2009-10 ದಿನಾಂಕ 05-03-2010 ರನ್ವಯ ಶೇಕಡ 60 ರಷ್ಟು ನಿವೇಶನಗಳನ್ನು ಅರ್ಜಿದಾರರಾದ ಶ್ರೀಮತಿ ವಿದ್ಯಾಜನ್ನಪ್ಪ ಎಂಬುವವರ ಹೆಸರಿಗೆ ಬಿಡುಗಡೆ ಮಾಡಲಾಗಿದ್ದು, ಅರ್ಜಿದಾರರು ನಿರ್ವಹಿಸಬೇಕಾದ ಅಗತ್ಯ ಕಾಮಗಾರಿಗಳನ್ನು ನಿರ್ವಹಿಸಲು ಈ ಕಛೇರಿಯ ಕಾರ್ಯಾದೇಶ ಸಂಖ್ಯೆ ತುನಪ್ರಾ/ಸಕಾಇ/ಎಲ್‌ಎಒ/52/2011-12 ದಿನಾಂಕ 20-04-2011 ರಂದು ಕಾರ್ಯಾದೇಶ ನೀಡಲಾಗಿದ್ದು. ಡಾಂಬರೀಕರಿಸಿದ ರಸ್ತೆ, ಕಲ್ಲು ಚಪ್ಪಡಿ ಚರಂಡಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ವಿದ್ಯುತ್ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಿದ್ದು, ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದೆಂದು ಈ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು ವರದಿ ನೀಡಿದ್ದು, ಸದರಿ ವರದಿಯನ್ವಯ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಪ್ರಾಧಿಕಾರದ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಪ್ರಸ್ತಾವಿತ ಪ್ರದೇಶದ ಸ್ಥಳ ಪರಿಶೀಲನೆ ಮಾಡಲಾಯಿತು ಹಾಗೂ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ವಸತಿ ವಿನ್ಯಾಸದ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುವ ಕಾರಣ ಅಂತಿಮ ಅನುಮೋದನೆಗೆ ಸಿದ್ದಪಡಿಸಿರುವ ವಿನ್ಯಾಸದಂತೆ ನಿವೇಶನಗಳನ್ನು ರಚಿಸಲಾಗಿರುತ್ತದೆ. ಆದ್ದರಿಂದ ಉಳಿಕೆ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದು.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಪ್ರಾಧಿಕಾರದ ತಾಂತ್ರಿಕ ಶಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಶ್ರೀಮತಿ ವಿದ್ಯಾಜನ್ನಪ್ಪ ಎಂಬುವವರ ಹೆಸರಿಗೆ ತುಮಕೂರು ನಗರದ ಸತ್ಯಮಂಗಲ ಗ್ರಾಮದ ಸರ್ವೆ ನಂಬರ್ 148/1 ರಲ್ಲಿ ವಿಸ್ತೀರ್ಣ 0–15$^{1}/_{2}$ ಗುಂಟೆ ಜಮೀನಿಗೆ ನೀಡಲಾಗಿರುವ ವಿನ್ಯಾಸ ಅನುಮೋದನೆ ಸಂಬಂಧ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಅಂಶಗಳನ್ನು ಪರಿಗಣಿಸಲು ಡಾಂಬರೀಕರಿಸಿದ ರಸ್ತೆ, ಚರಂಡಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ರಸ್ತೆಗಳ ದಾನಪತ್ರ, ವಿದ್ಯುತ್ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಿದ್ದು, ಪ್ರಾಥಮಿಕ ವಿನ್ಯಾಸದಲ್ಲಿ ಉಳಿದಿರುವ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಿ, ಸದರಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 27**

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಕರ್ಯ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ.

**ಟಿಪ್ಪಣಿ**

ವಿಷಯಕ್ಕೆ ಸಂಬಂಧಿಸಿದಂತೆ, ಈ ಹಿಂದೆ ದಿನಾಂಕ 31–03–2012 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 42 ರಲ್ಲಿ ನಾಗರೀಕ ಸೌಕರ್ಯ ನಿವೇಶನಗಳನ್ನು ಹಂಚಿಕೆ ಮಾಡಲು ಕ್ರಮವಹಿಸಲಾಗಿತ್ತು. ಆದರೆ ಪ್ರಕಟಿಸಿದ ಎಲ್ಲಾ ನಾಗರೀಕ ಸೌಕರ್ಯ ನಿವೇಶನಗಳಿಗೆ ಅರ್ಜಿ ಬಂದಿಲ್ಲದ ಕಾರಣ ಬಾಕಿಯಿರುವ ನಾಗರೀಕ ಸೌಕರ್ಯ ನಿವೇಶನಗಳು ಸೇರಿದಂತೆ ಹೊಸದಾಗಿ ರಚಿಸಲಾದ ಬಡಾವಣೆಯಲ್ಲಿನ ಲಭ್ಯ ನಾಗರೀಕ ಸೌಕರ್ಯ ನಿವೇಶನಗಳನ್ನು ಹಂಚಿಕೆ ಮಾಡಲು ಪ್ರಕಟಣೆ ಹೊರಡಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿದೆ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಪ್ರಾಧಿಕಾರದ ದಿನಾಂಕ 31–03–2012 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಹಂಚಿಕೆಯಾಗದೇ ಪ್ರಾಧಿಕಾರದ ವಶದಲ್ಲಿರುವ ಹಾಗೂ ಹಾಲಿ ಹೊಸ ವಿನ್ಯಾಸಗಳ ಅನುಮೋದನೆಯಿಂದ ಲಭ್ಯವಿರುವ ನಾಗರೀಕ ಸೌಕರ್ಯ ನಿವೇಶನಗಳನ್ನು ಪ್ರಕಟಣೆ ನೀಡಿ ಹಂಚಿಕೆಗೆ ಕ್ರಮವಹಿಸಲು ಮತ್ತು ಕಾರ್ಮಿಕ ಇಲಾಖೆಯಿಂದ ಇ.ಎಸ್.ಐ. ಅಸ್ಪತ್ರೆ ಸ್ಥಾಪಿಸಲು ನಾಗರೀಕ ಸೌಕರ್ಯ ನಿವೇಶನದ ಕೋರಿಕೆ ಬಂದಲ್ಲಿ ಆಧ್ಯತೆಯ ಮೇಲೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 28**

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ರಿ), ಅಖಿಲ ಭಾರತೀಯ ರಾಷ್ಟ್ರೀಯ ಪತ್ರಕರ್ತರ 65ನೇ ಅಧಿವೇಶನ ತುಮಕೂರಿನಲ್ಲಿ ನಡೆಯುತ್ತಿದ್ದು, ಸ್ಮರಣಾ ಸಂಚಿಕೆಗೆ ಜಾಹಿರಾತು ನೀಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 12-10-2012 ರಿಂದ 14-10-2012 ರವರೆಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ರಿ), ಜಿಲ್ಲಾ ಘಟಕ, ತುಮಕೂರು ಇವರ ಆಶ್ರಯದಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಪತ್ರಕರ್ತರ 65ನೇ ಅಧಿವೇಶನ ನಡೆಯುತ್ತಿದ್ದು, ಸದರಿ ಕಾರ್ಯಕ್ರಮದ ನೆನಪಿನ ಸಂಚಿಕೆಗಳನ್ನು ಹೊರತರುತ್ತಿದ್ದು, ಈ ಸ್ಮರಣಾ ಸಂಚಿಕೆಗೆ ಜಾಹಿರಾತು ನೀಡಲು ಪ್ರಾಧಿಕಾರದ ಅಧ್ಯಕ್ಷರನ್ನು ಕೋರಿರುತ್ತಾರೆ. ಅಧ್ಯಕ್ಷರು ವಿಷಯವನ್ನು ಇಂದಿನ ಅಂದರೆ ದಿನಾಂಕ 28-09-2012 ರ ಪ್ರಾಧಿಕಾರದ ಸಭೆಯಲ್ಲಿ ಮಂಡಿಸುವಂತೆ ತಿಳಿಸಿರುತ್ತಾರೆ. ಜಾಹಿರಾತು ನೀಡಲು ಸರ್ಕಾರದ ಪೂರ್ವಾನುಮತಿ ಅಗತ್ಯವಿದ್ದು, ಜಾಹಿರಾತು ನೀಡುವ ಸಂಬಂಧ ವಿಷಯವನ್ನ ಪ್ರಾಧಿಕಾರದ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ದಿನಾಂಕ 12-10-2012 ರಿಂದ 14-10-2012 ರವರೆಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ರಿ), ಜಿಲ್ಲಾ ಘಟಕ, ತುಮಕೂರು ಇವರ ಆಶ್ರಯದಲ್ಲಿ 20 ವರ್ಷಗಳ ನಂತರ ತುಮಕೂರಿನಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಪತ್ರಕರ್ತರ 65ನೇ ಅಧಿವೇಶನ ನಡೆಯುತ್ತಿದ್ದು, ಸದರಿ ಕಾರ್ಯಕ್ರಮದ ನೆನಪಿನ ಸಂಚಿಕೆಗಳನ್ನು ಹೊರತರುತ್ತಿದ್ದು, ಈ ಸ್ಮರಣಾ ಸಂಚಿಕೆಗೆ ಜಾಹಿರಾತು ನೀಡಲು ಕೋರಿರುವ ವಿಷಯವನ್ನು ಚರ್ಚಿಸಲಾಯಿತು. ಸದರಿ ಕಾರ್ಯಕ್ರಮವು ದಿನಾಂಕ 12-10-2012 ರಂದು ನಡೆಯುವುದರಿಂದ ಹೆಚ್ಚಿನ ಕಾಲಾವಕಾಶ ವಿರುವುದಿಲ್ಲವಾದುದರಿಂದ ಮತ್ತು ಈ ಕಾರ್ಯಕ್ರಮಕ್ಕೆ ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳು ಆಗಮಿಸುತ್ತಿದ್ದು, ಈ ಸಂದರ್ಭದಲ್ಲಿ ಅಭಿವೃದ್ಧಿಗೊಂಡಿರುವ ಅಮಾನಿಕೆರೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಲೋಕಾರ್ಪಣೆ ಮಾಡುವುದರೊಂದಿಗೆ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವು ಕೈಗೊಂಡಿರುವ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸುವುದರಿಂದ ಇವುಗಳಿಗೆ ಸಂಬಂಧಿಸಿದ ಮಾಹಿತಿ ಮತ್ತು ಪ್ರಾಧಿಕಾರವು ಕಳೆದ ಮೂರು ವರ್ಷಗಳಿಂದ ಕೈಗೊಂಡಿರುವ ಇತರೆ ಅಭಿವೃದ್ಧಿ ಕಾರ್ಯಕ್ರಮಗಳ ಮಾಹಿತಿಯನ್ನು ಸ್ಮರಣಾ ಸಂಚಿಕೆಗೆ ಜಾಹಿರಾತು ರೂಪದಲ್ಲಿ ನೀಡುವುದು ಅವಶ್ಯಕವಾಗಿರುತ್ತದೆಂದು ಅಧ್ಯಕ್ಷರು ಮತ್ತು ಸದಸ್ಯರು ಸಭೆಗೆ ತಿಳಿಸಿದರು. ಈ ಸಂಬಂಧ ಒಂದು ಪುಟ ಜಾಹಿರಾತು ರೂ.50,000 ಗಳನ್ನು ನೀಡಲು ಸಭೆಯು ತೀರ್ಮಾನಿಸಿತು.

ಸಹಿ/-
ಅಧ್ಯಕ್ಷರು
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು.

- ನಕಲು -

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು.

ಸಂಖ್ಯೆ ಟಿಯುಡಿಎ / ಸಭೆ / 06 / 2012-13

## ದಿನಾಂಕ 28-09-2012 ರಂದು ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಹಾಜರಾತಿ ವಹಿ

* * * *

**ಹಾಜರಿದ್ದ ಸದಸ್ಯರು**

| | | |
|---|---|---|
| **01.** | **ಮಾನ್ಯಶ್ರೀ ಎಸ್.ಆರ್.ಶ್ರೀಧರಮೂರ್ತಿ ರವರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಅಧ್ಯಕ್ಷರು |
| **02.** | **ಶ್ರೀ ಶಾಂತರಾಜು ರವರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಸದಸ್ಯರು |
| **03.** | **ಶ್ರೀ ಪಿ.ರವಿಶಂಕರ್ ರವರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಸದಸ್ಯರು |
| **04.** | **ಶ್ರೀಮತಿ ಲೀಲಾವತಿ ರವರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಸದಸ್ಯರು |
| **05.** | **ಶ್ರೀ ರವಿ ರವರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಸದಸ್ಯರು |
| **06.** | **ಶ್ರೀ ರಾಮಕೃಷ್ಣ ರವರು**<br>(ನಗರ ಸಭಾ ಸದಸ್ಯರು) ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಸದಸ್ಯರು |
| **07.** | **ಆಯುಕ್ತರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಪದನಿಮಿತ್ತ ಸದಸ್ಯರು |
| **08.** | **ನಗರ ಯೋಜನಾ ಸದಸ್ಯರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಸದಸ್ಯರು |
| **09.** | **ಕಾರ್ಯಪಾಲಕ ಅಭಿಯಂತರರು**<br>ಬೆಸ್ಕಾಂ, ತುಮಕೂರು. | ಸದಸ್ಯರು (ಪರವಾಗಿ) |
| **10.** | **ಸಹಾಯಕ ಕಾರ್ಯಪಾಲಕ ಅಭಿಯಂತರರು**<br>ಕ.ನ.ನೀ.ಸ ಮತ್ತು ಒ.ಚ.ಮಂಡಳಿ, ತುಮಕೂರು. | ಸದಸ್ಯರು |
| **11.** | **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು**<br>ತುಮಕೂರು ಜಿಲ್ಲೆ, ತುಮಕೂರು. | ಸದಸ್ಯರು (ಪರವಾಗಿ) |

**ಗೈರುಹಾಜರಿದ್ದ ಸದಸ್ಯರು**

| | | |
|---|---|---|
| **12.** | **ಮಾನ್ಯ ಶ್ರೀ ಎಸ್.ಶಿವಣ್ಣರವರು**<br>ಸಚಿವರು ಹಾಗೂ ತುಮಕೂರು ನಗರ ವಿಧಾನ ಸಭಾ ಸದಸ್ಯರು, ತುಮಕೂರು | ಸದಸ್ಯರು |
| **13.** | **ಮಾನ್ಯ ಶ್ರೀ ಬಿ.ಸುರೇಶಗೌಡರವರು**<br>ಸದಸ್ಯರು, ತುಮಕೂರು ಗ್ರಾಮೀಣ ವಿಧಾನ ಸಭಾ ಸದಸ್ಯರು,<br>ತುಮಕೂರು. | ಸದಸ್ಯರು |
| **14.** | **ಡಾ॥ ಎಂ.ಆರ್.ಹುಲಿನಾಯ್ಕರ್ ರವರು**<br>ವಿಧಾನ ಪರಿಷತ್ ಸದಸ್ಯರು, ತುಮಕೂರು. | ಸದಸ್ಯರು |
| **15.** | **ಜಿಲ್ಲಾಧಿಕಾರಿಗಳು**<br>ತುಮಕೂರು ಜಿಲ್ಲೆ, ತುಮಕೂರು. | ಪದನಿಮಿತ್ತ ಸದಸ್ಯರು |
| **16.** | **ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್**<br>ಸದಸ್ಯರು, ತುಮಕೂರು. | ಸದಸ್ಯರು |
| **17.** | **ಶ್ರೀ ಜಿ.ಕೆ.ಶ್ರೀನಿವಾಸ್ ರವರು**<br>ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು. | ಸದಸ್ಯರು |
| **18.** | **ಪೌರಾಯುಕ್ತರು**<br>ನಗರಸಭೆ, ತುಮಕೂರು. | ಪದನಿಮಿತ್ತ ಸದಸ್ಯರು |
| **19.** | **ಕಾರ್ಯನಿರ್ವಾಹಕ ಅಭಿಯಂತರರು**<br>ಲೋಕೋಪಯೋಗಿ ಇಲಾಖೆ, ತುಮಕೂರು. | ಸದಸ್ಯರು |